
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜೂನ್ 2019 ಮಾಸ ಪತ್ರಿಕೆ

ಸಂಪುಟ/Volume : 41
ಸಂಚಿಕೆ/Issue : 9
ಪುಟ/Pages : 12
ಬೆಲೆ/Price : ₹ 10/–

Akhila Karnataka Shikshaka Samachar | June 2019 | Monthly




## ರಾಷ್ಟ್ರೀಯ ಶಿಕ್ಷಣ ನೀತಿ

## ಏನಿದು? ಏಕಿದು?

A Journal of Karnataka State Secondary Teachers' Association

# ಅತಿ ಕಡಿಮೆ ಸೌಲಭ್ಯ ಪಡೆದು ಅತಿ ಹೆಚ್ಚು ದುಡಿಯುವ ಮೂಕಪ್ರಾಣಿಯೇ ಶಿಕ್ಷಕ ?

ಭಾರತೀಯ ಸಮಾಜ ಪ್ರಾಚೀನ ಕಾಲದಿಂದಲೂ ಶಿಕ್ಷಕನಿಗೆ ಉನ್ನತ ಸ್ಥಾನಮಾನ ನೀಡಿ ಗೌರವಿಸಿದೆ. ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ ಎಂದು ತಂದೆ-ತಾಯಿಯರ ಜೊತೆ ಸ್ಥಾನಮಾನ ಕಲ್ಪಿಸಿದೆ. ಹಿಂದಿನ ಕಾಲದಲ್ಲಿ ರಾಜ-ಮಹಾರಾಜರು ತಮ್ಮ ಮಕ್ಕಳನ್ನು ಗುರುಕುಲಗಳಲ್ಲಿ ಬಿಟ್ಟು ಗುರು ಮುಖೇನ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡುತ್ತಿದ್ದರು. ಗುರುಕುಲದ ಆಚಾರ್ಯರು ಜೀವನೋಪಾಯಕ್ಕಾಗಿ ಸಮಾಜದಿಂದ ಸಲ್ಲುತ್ತಿದ್ದ ಅಲ್ಪಾದಾಯದಿಂದ ತನ್ನದೇ ಗುರುಕುಲದಲ್ಲಿ ಸಂತೃಪ್ತಿ ಜೀವನ ನಡೆಸುತ್ತಿದ್ದರು. ತಮ್ಮ ಮನೆಯಲ್ಲಿಯೇ ಶಿಷ್ಯರೆಲ್ಲರನ್ನಿಟ್ಟುಕೊಂಡು ಶಿಕ್ಷಣ ನೀಡುತ್ತಿದ್ದರು.

ಆದರೆ ಇಂದು ಸರ್ಕಾರವು ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವ ನಿಟ್ಟಿನಲ್ಲಿ ಅನೇಕ ಯೋಜನೆಗಳನ್ನು ರೂಪಿಸಿ, ಅಪಾರ ಹಣ ಖರ್ಚು ಮಾಡುತ್ತಿದೆ. ಈ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಹಲವು ಪಂಡಿತರು ಹಾಗೂ ರಾಜಕೀಯ ಮುತ್ಸದ್ಧಿಗಳು ಗೊಂದಲಮಯ ವಾತಾವರಣ ಸೃಷ್ಟಿಸಿ ವಿದ್ಯಾಕ್ಷೇತ್ರವನ್ನು ಕಲುಷಿತಗೊಳಿಸುವುದರ ಜೊತೆಗೆ ಶಿಕ್ಷಕರಿಗೆ ಸರ್ಕಾರದ ಎಲ್ಲಾ ಯೋಜನೆಗಳ ಅಂಕಿ-ಅಂಶಗಳನ್ನೂ ಕ್ರೋಢೀಕರಿಸಲು ಅಂದರೆ ಚುನಾವಣೆ ಕಾರ್ಯ, ಮತಪಟ್ಟಿ ತಯಾರಿಕೆ ಹಾಗೂ ಪರಿಷ್ಕರಣೆ, ಜನಗಣತಿ, ಮನೆಗಣತಿ, ಪಶುಗಣತಿ ಇತ್ಯಾದಿ ರಾಷ್ಟ್ರೀಯ ಕಾರ್ಯಗಳಲ್ಲಿ ಉಪಯೋಗಿಸಿಕೊಳ್ಳುತ್ತಾರೆ. ಆದರೆ ಸರ್ಕಾರದ ಇನ್ನಿತರ ವಿಭಾಗಗಳಲ್ಲಿ ಸಿಗುವ ಸೌಲಭ್ಯಗಳು ಸಹ ಶಿಕ್ಷಕನಿಗೆ ದೊರಕುವುದು ಕಷ್ಟವಾಗಿದೆ. ಹೀಗಾಗಿಯೇ ಶಿಕ್ಷಕರ ಸ್ಥಾನಮಾನ ಸಮಾಜದಲ್ಲಿ ಕುಗ್ಗುತ್ತಿದೆ. ದೇಶ-ವಿದೇಶಗಳಲ್ಲೂ ಸಹ ಶಿಕ್ಷಕ ವೃತ್ತಿಗೆ ಬೇಡಿಕೆ ಕುಸಿಯುತ್ತಿದೆ. ಸಮಾಜ ನಿರ್ಮಾಣದ ಕನಸುಗಾರ, ಕೆಲಸಗಾರ ಶಿಕ್ಷಕ ಎಂಬುದನ್ನು ಸರ್ಕಾರ ಮರೆಯಬಾರದು.

ಒಂದೆಡೆ ಶಾಲಾ ಆಡಳಿತ ವರ್ಗ, ಅಧಿಕಾರಿಗಳ ಕಾನೂನಿನ ಹಿಡಿತ, ಇನ್ನೊಂದೆಡೆ ರಾಜಕೀಯ ಒತ್ತಡ, ಮತ್ತೊಂದೆಡೆ ಶಿಕ್ಷಕರ ಗೌರವ ರಕ್ಷಣೆ, ಸಮಾಜದಲ್ಲಿ ಉತ್ತಮ ಸ್ಥಾನಮಾನ, ಇವೆಲ್ಲವುಗಳ ಹಿಡಿತದಿಂದ ಪಾರಾಗಿ ಶಿಕ್ಷಣದ ಅಭಿವೃದ್ಧಿಗೆ ಶ್ರಮಿಸುವುದು ಇನ್ನೂ ಕಷ್ಟಕರವಾಗಿದೆ. ಸರ್ಕಾರದ ಅನೇಕ ಯೋಜನೆಗಳ ಜಾರಿಯಲ್ಲಿ ಅಂದರೆ ಪಠ್ಯಪುಸ್ತಕ ಮತ್ತು ಸಮವಸ್ತ್ರ ವಿತರಣೆ, ವಿದ್ಯಾರ್ಥಿವೇತನ ವಿತರಣೆ, ಬಾ ಮರಳಿ ಶಾಲೆಗೆ, ಚಿಣ್ಣರ ಅಂಗಳ ಮುಂತಾದವುಗಳನ್ನು ಸಮರ್ಪಕವಾಗಿ ವಿತರಿಸುವಲ್ಲಿಯೂ ಶಿಕ್ಷಕರೇ ಹೊಣೆಗಾರರು. ಶಿಕ್ಷಣಕ್ಕೆ ಸಂಬಂಧವಿಲ್ಲದ ಕಾರ್ಯಗಳಲ್ಲಿ ತೊಡಗುತ್ತಿರುವುದರಿಂದ ಸಮಾಜದ ನಿಂದನೆಗೆ ಪಾತ್ರಾಗುತ್ತಿದ್ದಾರೆ. ಆದಾಗ್ಯೂ ಇಷ್ಟೆಲ್ಲವನ್ನೂ ತನ್ನ ಜಾಣ್ಮೆಯಿಂದ ಹೊಂದಾಣಿಕೆ ಮಾಡಿಕೊಂಡು ಶಿಕ್ಷಣಾಭಿವೃದ್ಧಿಗಾಗಿ ಶ್ರಮಿಸುವ ಶಿಕ್ಷಕನಿಗೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ಕಡಿತಗೊಳಿಸಿದರೆ ಶಿಕ್ಷಕ ನೆಮ್ಮದಿಯಿಂದ ಕೆಲಸ ಮಾಡುವುದಾದರೂ ಹೇಗೆ?

ಎಲ್ಲಾ ಜಯಂತಿಗಳ ಆಚರಣೆಯ ದಿನಗಳಂದೂ ಶಿಕ್ಷಕ ಶಾಲೆಯಲ್ಲಿ ಆ ಜಯಂತಿಗಳನ್ನು ಆಚರಿಸುವುದರೊಂದಿಗೆ ಆ ದಿನದ ಮಹತ್ವವನ್ನು ತಿಳಿಸುತ್ತಾರೆ. ಹಾಗಾಗಿ ಜಯಂತಿಗಳ ರಜಾದಿನವು ಕಡಿತಗೊಂಡಂತೆಯೇ. ಸರ್ಕಾರದ ಇತರೆ ಇಲಾಖೆಯವರಿಗೆ ಈ ಗೋಜು ಇಲ್ಲ ಎಂಬುದನ್ನು ಎಲ್ಲರೂ ಗಮನಿಸಬೇಕು. ಇನ್ನು ವಾರ್ಷಿಕವಾಗಿ ಬರುವ 15 ಸಾಂಧರ್ಭಿಕ ರಜೆಗಳನ್ನು ಬಹಳ ಕಂಜೂಸುತನದಿಂದ ಉಪಯೋಗಿಸಿದರೂ ಕೊನೆಗೆ ಗಳಿಕೆ ರಜೆ ಬಳಸುವುದು ತಪ್ಪುವುದಿಲ್ಲ. ಶಿಕ್ಷಕ ಶಾರೀರಿಕವಾಗಿ ಮಾತ್ರವಲ್ಲದೇ ಮಾನಸಿಕವಾಗಿಯೂ ಶಾಲೆಯಲ್ಲಿ ಹಾಜರಿದ್ದರೆ ಮಾತ್ರ ಬೋಧನಾಕಾರ್ಯ ಪರಿಣಾಮಕಾರಿಯಾಗಿ ಯಶಸ್ವಿಯಾಗುತ್ತದೆ. ಮನೆಯಲ್ಲಿನ ತೊಂದರೆಗಳನ್ನು, ಆಗು-ಹೋಗುಗಳನ್ನು ಶಿಕ್ಷಕ ಸಮರ್ಥವಾಗಿ ನಿಭಾಯಿಸಲೇಬೇಕಾಗುವುದು ಅನಿವಾರ್ಯ. ಇರುವ ರಜೆಗಳನ್ನೆಲ್ಲಾ ಕಡಿತಗೊಳಿಸಿದರೆ ಶಿಕ್ಷಕ ಕೌಟುಂಬಿಕ ಸಮಸ್ಯೆಗಳನ್ನು ನಿಭಾಯಿಸಲಾಗದೇ ಮಾನಸಿಕವಾಗಿ ಕುಗ್ಗಿ ಹೋಗುವುದಿಲ್ಲವೇ? ಶಿಕ್ಷಕರಿಗೂ ಪರಿವಾರ, ನೆಂಟರಿಷ್ಟರು, ಸುಖ-ದುಃಖದ ಸಂದರ್ಭಗಳು ಬರುವುದಿಲ್ಲವೇ? ಮೇಷ್ಟ್ರು ಅಂದರೆ ತಂದೆ-ತಾಯಿಗಳು ರೋಸಿಕೊಂಡು ಕಳಿಸುವ ಮಕ್ಕಳ ಹೊರುವ ಅಗಸನ ಕತ್ತೆಯಂತಾಗಿದೆ. "ಎಲ್ಲರಿಗೂ ಅಗತ್ಯವಾಗಿ, ಯಾರಿಗೂ ಬೇಡವಾದ ತ್ರಿಶಂಕು ಸ್ಥಿತಿ ಶಿಕ್ಷಕನದ್ದಾಗಿದೆ. ಅತೀ ಕಡಿಮೆ ಕೂಲಿಗೆ ಅತೀ ಹೆಚ್ಚು ದುಡಿಯುವ ಮೂಕ ಪ್ರಾಣಿ ಶಿಕ್ಷಕ" ಎಂಬುವ ತ.ರಾ.ಸು.ರವರ ಅಭಿಪ್ರಾಯದಂತಾಗಿದೆ ಶಿಕ್ಷಕರ ಪರಿಸ್ಥಿತಿ. ದಸರಾ ರಜೆಯಲ್ಲೂ ಕಡಿತ, ಬೇಸಿಗೆ ರಜೆಯಲ್ಲೂ ಕಡಿತ, ಸಾಂದರ್ಭಿಕ ರಜೆಗಳಲ್ಲಿಯೂ ಕಡಿತವಾದರೆ ಶಿಕ್ಷಕರು ನೆಮ್ಮದಿಯಿಂದ ಬೋಧನಾ ಕಾರ್ಯ ಮಾಡುವುದಾದರೂ ಹೇಗೆ? ಸರ್ಕಾರ ಈ ಕಡೆ ಸಮಾಧಾನ ಚಿತ್ತದಿಂದ ಚಿಂತಿಸಿ ಶಿಕ್ಷಕ ತನ್ನ ಬೇಡಿಕೆಗಳಿಗಾಗಿ ಬೇಡಿ ಸಾಕಾಗಿ ಹೋರಾಟ ಮಾಡುವ ಮೊದಲು ಶಿಕ್ಷಕ ವೃತ್ತಿಯ ಪಾವಿತ್ರ್ಯತೆಯನ್ನು ಕಾಪಾಡುವುದು ಅತ್ಯಂತ ಅವಶ್ಯಕ.

ಸಂಪಾದಕ



ಊರ್ಧ್ವ ಬಾಹು ವಿಕಾಮ್ಯೇಷಾಂ
ನಚಕಚ್ಚಿತ್ ಶೃಣೋತಿಮೇ॥
ಧರ್ಮಾದರ್ಥಶ್ಚಕಾಮಶ್ಚ
ಸ ಕಿಮರ್ಥಂ ನ ಸೇವ್ಯತೇ? ॥

ಎರಡೂ ಕೈಯೆತ್ತಿ ನಾನು ಘೋಷಿಸುತ್ತಿದ್ದರೂ
ನೀವೇಕೆ ಕೇಳುತ್ತಿಲ್ಲ? ಅರ್ಥ ಕಾಮಗಳನ್ನು
ಧರ್ಮಾಧಾರಿತವಾಗಿ ಏಕೆ ಸೇವಿಸುತ್ತಿಲ್ಲ?

- ಮಹರ್ಷಿ ವೇದವ್ಯಾಸ

## ಪರಿವಿಡಿ


- ರಾಷ್ಟ್ರೀಯ ಶಿಕ್ಷಣ ನೀತಿ: ಏನಿದು? ಏಕಿದು? 3
- ಶಿಕ್ಷಣ ನೀತಿ 7
- ಪಂಚಶೀಲಗಳ ನಾರೀಶಕ್ತಿ ಅಹಲ್ಯಾಬಾಯಿ ಹೋಳ್ಕರ್ 8
- ಸಾಧನೆ, ಕೃತಜ್ಞತೆಯ ಕಥೆ 9
- ರಾಷ್ಟ್ರೀಯ ಶಿಕ್ಷಣ ನೀತಿ – 2019 10
- ಶಿಕ್ಷಣ ನೀತಿ ಕರಡು ರಚನೆ ಸಮಿತಿಯ ಸದಸ್ಯ ಪ್ರೊ॥ ಎಂ.ಕೆ.ಶ್ರೀಧರ್ ಜೊತೆ ನಡೆಸಿದ ಸಂದರ್ಶನ 11
- ಚಿತ್ರ ಸುದ್ದಿ 12

# ರಾಷ್ಟ್ರೀಯ ಶಿಕ್ಷಣ ನೀತಿ: ಏನಿದು? ಏಕಿದು?

ಜಗತ್ತನ್ನು ಬದಲಿಸಲು ಶಿಕ್ಷಣ ಅತ್ಯುತ್ತಮ ಆಯುಧ ಎಂದರು ನೆಲ್ಸನ್ ಮಂಡೇಲಾ. ವ್ಯಕ್ತಿಗೆ ಅತ್ಯಂತ ಆಳವಾಗಿ ಮತ್ತು ತರ್ಕಬದ್ಧವಾಗಿ ಚಿಂತಿಸಲು ಕಲಿಸುವುದೇ ಶಿಕ್ಷಣದ ಮುಖ್ಯ ಕೆಲಸ ಎಂದರು ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್. ಶಿಕ್ಷಣಕ್ಕೆ ಅಂತ್ಯವೆಂಬುದಿಲ್ಲ, ಒಂದು ಪುಸ್ತಕ ಓದಿದರೆ ಒಂದು ಡಿಗ್ರಿ ಸಂಪಾದಿಸಿದರೆ ಶಿಕ್ಷಣ ಸಾರ್ಥಕ್ಯ ಪಡೆದಂತಲ್ಲ. ಹುಟ್ಟಿದ ಕ್ಷಣದಿಂದ ಸಾಯುವ ಗಳಿಗೆಯವರೆಗೆ ನಿರಂತರವಾಗಿ ಮನುಷ್ಯ ಜಾರಿಯಲ್ಲಿಟ್ಟಿರುವ ಕಲಿಕೆಯ ದಾರಿಯೇ ಶಿಕ್ಷಣ ಎಂದರು ಜಿಡ್ಡು ಕೃಷ್ಣಮೂರ್ತಿ. ಶಿಕ್ಷಣದ ಉದ್ದೇಶ ಕೇವಲ ಜ್ಞಾನವನ್ನು ಹೆಚ್ಚು ಮಾಡುವುದಲ್ಲ, ಮಗುವಿಗೆ ತಾನಾಗಿ ಕಲಿಯಲು ಮತ್ತು ಅನ್ವೇಷಿಸಲು ಅನುವಾಗುವ ಅವಕಾಶಗಳನ್ನು ಸೃಷ್ಟಿಸುವುದು; ಹೊಸ ಹೊಸ ಸಂಗತಿಗಳನ್ನು ಮಾಡಬಲ್ಲ, ಸೃಜಿಸಬಲ್ಲ ಸಾಮರ್ಥ್ಯವನ್ನು ಮನುಷ್ಯನಲ್ಲಿ ಬೆಳೆಸುವುದು ಎಂದರು ಫ್ರೆಂಚ್ ಚಿಂತಕ ಜಾನ್ ಪ್ಯಾಜೆ. ಶಿಕ್ಷಣದ ಬೇರುಗಳು ಕಹಿ ಇರಬಹುದು, ಆದರೆ ಫಲ ಸಿಹಿ ಎಂದ ಅರಿಸ್ಟಾಟಲ್.

ಜಗತ್ತಿನ ಎಲ್ಲ ಚಿಂತಕರು, ಮಹಾತ್ಮರು ಹೇಳಿದ ಮಾತು ಒಂದೇ. ಶಿಕ್ಷಣ ವೆಂಬುದು ಪಶುವನ್ನು ಮನುಷ್ಯನಾಗಿಸುವ ಮಾಯಾದಂಡ. ಶಿಕ್ಷಣ ಹೊರೆ ಯಾಗಬಾರದು. ಪಾಠಗಳನ್ನು ಉರು ಹೊಡೆಯುವುದು, ಉರು ಹೊಡೆದದ್ದನ್ನು ತಪ್ಪಿಲ್ಲದೆ ಪರೀಕ್ಷೆಯಲ್ಲಿ ಮರು ಒಪ್ಪಿಸುವುದು ಶಿಕ್ಷಣ ಅಲ್ಲ. ಶಿಕ್ಷಣದ ಏಕೈಕ ಗುರಿ ಮನುಷ್ಯನನ್ನು ಸ್ವತಂತ್ರ ಚಿಂತಕನಾಗಿಸುವುದು. ಅವನಲ್ಲಿ ಅದುವರೆಗೆ ಇರದಿದ್ದ ಹೊಸ ಚಿಂತನೆಗಳನ್ನು ಮೊಳೆಸುವುದು, ಬೆಳೆಸುವುದು. ಶಾಲೆ-ಕಾಲೇಜುಗಳಲ್ಲಿ ಶಿಕ್ಷಕರು ಅಂಥ ಅದ್ಭುತ ಕೆಲಸವನ್ನು ಮಾಡಬಲ್ಲರು. ನೂರು ವರ್ಷಗಳ ಮನುಷ್ಯನ ಜೀವನ, ಆತ ತನ್ನ ಮೊದಲ ಹದಿನೈದು ವರ್ಷಗಳಲ್ಲಿ ಪಡೆದ ಸಂಸ್ಕಾರವನ್ನು ಅವಲಂಬಿಸಿರುತ್ತದೆ. ಶಿಕ್ಷಣ ಎಂದರೆ ಸಂಸ್ಕಾರ. ಬೀಜ ಕುಡಿಯೊಡೆದು ಮರವಾಗಲು ಹೇಗೆ ಮಣ್ಣು, ನೀರು, ಬೆಳಕು ಬೇಕೋ ಹಾಗೆಯೇ ಮನುಷ್ಯ ಸಂಸ್ಕಾರವಂತನಾಗಲು ಶಾಲೆ, ಪಠ್ಯಕ್ರಮ, ಶಿಕ್ಷಕರು ಬಹಳ ಮುಖ್ಯ.

ಜಗತ್ತಿನಲ್ಲಿ ಪ್ರಗತಿ ಕಾಣಬೇಕು ಎಂದು ಕನಸು ಕಾಣುವ ಪ್ರತಿ ದೇಶವೂ ತನ್ನದೇ ಆದ ಶಿಕ್ಷಣ ನೀತಿಯನ್ನು ರೂಪಿಸುತ್ತದೆ. ದೇಶಕ್ಕೊಂದು ಶಿಕ್ಷಣ ನೀತಿ ಯಾಕಿರಬೇಕು? ಈ ಅಂಶಗಳನ್ನು ಹೇಳಬಹುದು: (1) ಪ್ರತಿ ಪ್ರಜೆಯೂ ತನ್ನ ದೇಶದ ಇತಿಹಾಸ, ಸಂಸ್ಕೃತಿಗಳ ಬಗ್ಗೆ ಕಲಿಯಬೇಕು. ನೆಲದ ಇತಿಹಾಸದ ಅರಿವಿಲ್ಲದೆ ದೇಶಪ್ರೇಮ ಬೆಳೆಯಲು ಸಾಧ್ಯವಿಲ್ಲ. ಹಾಗಾಗಿ ದೇಶದೊಳಗಿನ ಎಲ್ಲ ಪ್ರಜೆಗಳಿಗೂ ಒಂದು ಸಾಮಾನ್ಯ ತಿಳಿವಳಿಕೆಯನ್ನು ಕೊಡಬೇಕಾಗುತ್ತದೆ. (2) ದೇಶದ ಪ್ರಗತಿ ನೇರವಾಗಿ ಅಲ್ಲಿನ ಶಿಕ್ಷಣ ಪದ್ಧತಿಯ ಮೇಲೆ ನಿಂತಿದೆ. ಪ್ರಸ್ತುತವೆನಿಸದ ಶಿಕ್ಷಣದಿಂದ ದೇಶದ ಪ್ರಗತಿಗೆ ಅನುಕೂಲವಾಗಬಲ್ಲ ಶಿಕ್ಷಿತರನ್ನು ತಯಾರಿಸಲು ಸಾಧ್ಯವಿಲ್ಲ. (3) ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡಿಕೊಳ್ಳಬೇಕಾದರೆ ದೇಶದ ಎಲ್ಲರೂ ಒಂದು ಸಾಮಾನ್ಯ ಶಿಕ್ಷಣವನ್ನು ಪಡೆಯಬೇಕಾಗುತ್ತದೆ. (4) ಇಂದಿನ ಮಕ್ಕಳೇ ಮುಂದಿನ ಜನಾಂಗ ಎನ್ನುವ ಹಾಗೆಯೇ ಇಂದಿನ ವಿದ್ಯಾರ್ಥಿಗಳೇ ಮುಂದಿನ ಉದ್ಯೋಗಿಗಳು. ದೇಶದ ಉದ್ಯೋಗ-ನಿರುದ್ಯೋಗಗಳ ಅನುಪಾತಕ್ಕೂ ಶಿಕ್ಷಿತರ ಪ್ರಮಾಣಕ್ಕೂ ನೇರ ಸಂಬಂಧವಿದೆ. ಹಾಗೆಯೇ ದೇಶದ ಉದ್ಯೋಗಿಗಳ ಸಂಖ್ಯೆಗೂ ಆರ್ಥಿಕತೆಗೂ ಅನುಲೋಮ ಸಂಬಂಧವಿದೆ. ಹಾಗಾಗಿ ದೇಶದ ಆರ್ಥಿಕತೆಯನ್ನು ಉತ್ತಮ ಪಡಿಸಬೇಕಾದರೆ ದೇಶದಲ್ಲಿ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಸಿಗುವಂತೆ ಸರಕಾರ ನೋಡಿಕೊಳ್ಳಬೇಕಾಗುತ್ತದೆ. (5) ಶಿಕ್ಷಿತರಿಗೆ ದೇಶದ ಕಾನೂನು, ನೀತಿ-ನಿಯಮಗಳ ಬಗ್ಗೆ, ರಾಜಕೀಯ ಪರಿಸ್ಥಿತಿಗಳ ಬಗ್ಗೆ, ಸರಕಾರದ ಯೋಜನೆಗಳ ಬಗ್ಗೆ ವಿವರಿಸುವುದು ಸುಲಭ. ದೇಶದ ಜನ ಸುಶಿಕ್ಷಿತರಾದಷ್ಟೂ ಸರಕಾರದ ಹೊಣೆಗಾರಿಕೆ ಇಳಿಯುತ್ತದೆ. ಆದ್ದರಿಂದ ದೇಶದಲ್ಲಿ ಹೆಚ್ಚು ಹೆಚ್ಚು ಮಂದಿ ಶಿಕ್ಷಣದ ಪರಿಧಿಯೊಳಗೆ ಬರುವಂತೆ ಮಾಡುವುದು ಸರಕಾರದ ಜವಾಬ್ದಾರಿ. ಈ ಎಲ್ಲ ಕಾರಣಗಳಿಗೆ ದೇಶದಲ್ಲಿ ಶಿಕ್ಷಣ ವ್ಯವಸ್ಥೆಗೆ ಒಂದು ಸಾಮಾನ್ಯ ಚೌಕಟ್ಟು ಹಾಕಿಕೊಳ್ಳಬೇಕಾಗುತ್ತದೆ.

ಜಗತ್ತು ಮುಂದುವರಿದಂತೆಲ್ಲ ನಾವು ನಮ್ಮ ದೇಶದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಬದಲಾಯಿಸುತ್ತ ಇರಬೇಕಾಗುತ್ತದೆ. ಹಾಗೆಂದು ಶಿಕ್ಷಣದ ಮೂಲೋದ್ದೇಶಗಳನ್ನು ಬದಲಾಯಿಸುವ ಕೆಲಸವೇನೂ ನಡೆಯುವುದಿಲ್ಲ. ಗೊಂಬೆ ಅದೇ. ಆದರೆ ಹಳೆಯ ಬಟ್ಟೆ ತೆಗೆದು ಹೊಸ ಬಟ್ಟೆಯನ್ನು ಉಡಿಸುತ್ತಾರೆ. ಪ್ರತಿ ದಿನವೂ ಒಂದಿಲ್ಲೊಂದು ದಾರಿಯಲ್ಲಿ ಮುಂದಕ್ಕೆ ದೌಡಾಯಿಸುವ ಜಗತ್ತಿನೊಂದಿಗೆ ಹೆಜ್ಜೆ ಹಾಕಲು ಅಸಮರ್ಥರಾದರೆ ಕೆಲವೇ ವರ್ಷಗಳಲ್ಲಿ ನಾವು ಜಗತ್ತಿನ ಮುಂದೆ ಪುರಾತನರೂ ಅಪ್ರಸ್ತುತರೂ ಆಗುತ್ತೇವಲ್ಲ? ಹಾಗಾಗಿ ಜಗತ್ತಿನ ಅಗತ್ಯಗಳಿಗೆ ತಕ್ಕಂತೆ ನಮ್ಮ ಶಿಕ್ಷಣ ಕ್ರಮದಲ್ಲಿ ಅಷ್ಟಿಷ್ಟು ಬದಲಾವಣೆಗಳನ್ನು ಮಾಡಿಕೊಳ್ಳಲೇಬೇಕು. ಈ ಐಟಿ ಯುಗದಲ್ಲಿ ನಾವು ವಿದ್ಯಾರ್ಥಿಗಳಿಗೆ ಬಿಲ್ವಿದ್ಯೆ, ಅಶ್ವವಿದ್ಯೆ ಹೇಳಿಕೊಡುವುದು ಸಾಧ್ಯವಿಲ್ಲವಷ್ಟೆ? 1986ರಲ್ಲಿ, ನಮ್ಮ ದೇಶದಲ್ಲಿ, ಒಂದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಗಿತ್ತು. ಆಗಿನ ಕಾಲಕ್ಕೆ ಅದು ಚೆನ್ನಾಗಿಯೇ ಇತ್ತೆನ್ನೋಣ. ಆದರೆ ಮುಂದಿನ ಆರು ವರ್ಷಗಳಲ್ಲಿ ಅದರಲ್ಲಿ ಪರಿಷ್ಕಾರ ತರಬೇಕಾದ ಅನಿವಾರ್ಯತೆ ಎದುರಾಯಿತು. ಭಾರತ ಮುಕ್ತ ಮಾರುಕಟ್ಟೆಯಾಗಿ ಜಗತ್ತಿಗೆ ತನ್ನನ್ನು ತೆರೆದುಕೊಳ್ಳುತ್ತಿದ್ದ; ದೇಶದಲ್ಲಿ ಐಟಿ ಕ್ರಾಂತಿ ಪ್ರಾರಂಭವಾಗಿದ್ದ ಸಮಯ ಅದು. ಹಾಗಾಗಿ ಭಾರತದ ಕೋಟ್ಯಂತರ ಯುವಕರ ಸಮುದಾಯವನ್ನು ಗಮನದಲ್ಲಿರಿಸಿಕೊಂಡು ಶಿಕ್ಷಣ ನೀತಿಯಲ್ಲಿ ಒಂದಷ್ಟು ಬದಲಾವಣೆ ತರಲಾಯಿತು. ಆದರೆ ಅದಾಗಿ 25 ವರ್ಷಗಳೇ ಕಳೆದರೂ ನಮ್ಮ ಸರಕಾರಗಳಿಗೆ ಶಿಕ್ಷಣ ನೀತಿಯಲ್ಲಿ ಸುಧಾರಣೆ ತರಬೇಕು ಎಂದು ಅನಿಸಿಯೇ ಇರಲಿಲ್ಲ. ಪಠ್ಯಕ್ರಮದಲ್ಲಿ ಅಷ್ಟಿಷ್ಟು ಬದಲಾವಣೆಯಾಯಿತು; ಹೊಸ ಸವಾಲುಗಳಿಗೆ ತಕ್ಕಂತೆ ಒಂದಷ್ಟು ಹೊಸ ವಿಷಯಗಳನ್ನು ಸೇರಿಸಲಾಯಿತು ಎಂಬುದು ಬಿಟ್ಟರೆ ಕ್ರಾಂತಿಕಾರಕವಾದದ್ದು ಏನೂ ನಡೆಯಲಿಲ್ಲ. ಶಾಲಾಕಾಲೇಜುಗಳಲ್ಲಿ ನಡೆಯುವ ಶಿಕ್ಷಣ, ಉದ್ಯೋಗ ಅವಕಾಶಗಳು ಮತ್ತು ಉನ್ನತ ಸಂಸ್ಥೆಗಳಲ್ಲಿ ನಡೆಯುತ್ತಿರುವ ಸಂಶೋಧನೆ – ಇವಿಷ್ಟನ್ನೂ ಸಮಗ್ರವಾಗಿ ದೃಷ್ಟಿಯಲ್ಲಿಟ್ಟುಕೊಂಡು ಶಿಕ್ಷಣ ನೀತಿಯಲ್ಲಿ ಬದಲಾವಣೆ ತರಬೇಕು, ಹೊಸ ನೀತಿ ರೂಪಿಸಬೇಕು ಎಂದು ಯಾರಿಗೂ ಅನ್ನಿಸಲೇ ಇಲ್ಲ! 2014ರಲ್ಲಿ ಅಧಿಕಾರಕ್ಕೆ ಬಂದ ಎನ್‌ಡಿಎ ಸರಕಾರ ಆಮೂಲಾಗ್ರ ಬದಲಾವಣೆಗೆ ಕೈ ಹಾಕಿತು. ಇದು ಹುತ್ತಕ್ಕೆ ಕೈ ಹಾಕಿದಂತೆ ಎಂಬ ತಿಳಿವಳಿಕೆ ಅದಕ್ಕಿರಲಿಲ್ಲ ಎಂದೇನಲ್ಲ. ಆದರೆ ಯಾವುದೇ ವ್ಯವಸ್ಥೆಯಲ್ಲಿ ದೊಡ್ಡ ಮಟ್ಟದ ಬದಲಾವಣೆ ತರಬೇಕು ಎಂದರೆ ಜಗತ್ತಿಗೆ ಕಾಣಿಸುವಂಥ ಕೆಲವೊಂದು ದೊಡ್ಡ ಕೆಲಸಗಳನ್ನೇ ಕೈಗೆತ್ತಿಕೊಳ್ಳಬೇಕಾಗುತ್ತದೆ. ಹಳೆ ಮನೆಯ ಅಲ್ಲಲ್ಲಿ ಕೆಡವಿ ದುರಸ್ತಿ ಮಾಡುವುದಕ್ಕಿಂತ ಆ ಜರಾಜೀರ್ಣ ಮನೆಯನ್ನು-ತಳಪಾಯವೊಂದನ್ನುಳಿಸಿ-ಪೂರ್ತಿ ಕೆಡವಿ ಹೊಸದಾಗಿ ಕಟ್ಟುವುದು ತೃಪ್ತಿಯ ಕೆಲಸ ಎಂಬುದು ನಮಗೆಲ್ಲ ಗೊತ್ತಿರುವ ಸಂಗತಿಯೇ ಅಲ್ಲವೆ? 2015ರಲ್ಲಿ ರಚನೆಯಾದ "ಶಿಕ್ಷಣ ನೀತಿಯ ಕರಡು ರಚನಾ ಸಮಿತಿ" ಮಾಡಿದ ನಿರ್ಧಾರ ಕೂಡ ಇದೇ. ಶಿಕ್ಷಣವನ್ನು ನಾವು ಒಂದು ಸೀಮಿತ ದೃಷ್ಟಿಕೋನದಿಂದ ನೋಡುತ್ತಿದ್ದೇವೆ. ಈಗ ಇರುವ ವ್ಯವಸ್ಥೆಯಲ್ಲೇ ಅಲ್ಲಲ್ಲಿ ಬದಲಾವಣೆ ತಂದು ಅದೇ ಹೊಸ ಕ್ರಾಂತಿ ಎನ್ನುತ್ತಿದ್ದೇವೆ. ಆದರೆ ನಿಜವಾದ ಬದಲಾವಣೆ ತರಬೇಕಾದರೆ ಈಗ ಇರುವ ಚೌಕಟ್ಟನ್ನು ಒಡೆಯ ಬೇಕು. ಶಿಕ್ಷಣವನ್ನು ಜಗತ್ತಿನ ಮಹಾಮಹಿಮರು ಹೇಳಿದ ವ್ಯಾಖ್ಯೆಯ ದೃಷ್ಟಿಯಿಂದ ನೋಡಬೇಕು. ಶಿಕ್ಷಣದ ಉದ್ದೇಶ ಮನುಷ್ಯನ ಸರ್ವತೋಮುಖ ಅಭಿವೃದ್ಧಿ ಎನ್ನುವುದಾದರೆ ಅದನ್ನು ಸಾಧ್ಯವಾಗಿಸಬಲ್ಲ ರೀತಿಯಲ್ಲಿ ನಮ್ಮ ಶಿಕ್ಷಣ ಕ್ರಮವನ್ನು ಬದಲಾಯಿಸಲು ಸಾಧ್ಯವೇ ಯೋಚಿಸಬೇಕು. ಹೀಗೆ ಎನ್‌ಡಿಎ ಸರಕಾರದ ಅಡಿಯಲ್ಲಿ ರಚನೆಯಾದ ಸಮಿತಿ ಹೊಚ್ಚಹೊಸ ದೃಷ್ಟಿಕೋನವನ್ನಿಟ್ಟುಕೊಂಡು ಕೆಲಸಕ್ಕೆ ಇಳಿಯಿತು.

ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ನಿರ್ದೇಶನದ ಮೇರೆಗೆ ಡಾ. ಕೆ. ಕಸ್ತೂರಿರಂಗನ್ ಅಧ್ಯಕ್ಷತೆಯಲ್ಲಿ ಸಮಿತಿ ರಚನೆಯಾಯಿತು. ಇದರಲ್ಲಿ ಸದಸ್ಯರಾಗಿದ್ದವರು: ವಸುಧಾ ಕಾಮತ್ (ಮುಂಬೈ), ಕೆ. ಜೆ. ಅಲ್ಫೋನ್ಸ್ (ನೊಯ್ಡಾ), ಮಂಜುಲ್ ಭಾರ್ಗವ (ಪ್ರಿನ್ಸ್‌ಟನ್, ಅಮೆರಿಕಾ), ರಾಮಶಂಕರ ಕುರೀಲ್ (ಮಧ್ಯಪ್ರದೇಶ), ಟಿ. ವಿ. ಕಟ್ಟೀಮನಿ (ಮಧ್ಯಪ್ರದೇಶ), ಕೃಷ್ಣ ಮೋಹನ ತ್ರಿಪಾಠಿ (ಉತ್ತರ ಪ್ರದೇಶ), ಮಝರ್ ಆಸಿಫ್ (ನವದೆಹಲಿ), ಎಂ. ಕೆ. ಶ್ರೀಧರ್ (ಬೆಂಗಳೂರು), ರಾಜೇಂದ್ರ ಪ್ರತಾಪ್ ಗುಪ್ತ (ಕೇಂದ್ರ ಸರಕಾರ), ಶಕೀಲಾ ಶಂಸು (ಕೇಂದ್ರ ಸರಕಾರ). ಇವರೆಲ್ಲರೂ ಶಿಕ್ಷಣ ಕ್ಷೇತ್ರದಲ್ಲಿ ದಶಕಗಳಷ್ಟು ಕಾಲ ಕೆಲಸ ಮಾಡಿದವರು. ಪ್ರಾಧ್ಯಾಪಕರಾಗಿ, ಶಿಕ್ಷಣ ನೀತಿ ರೂಪಿಸುವ ಸಮಿತಿಗಳ ಸದಸ್ಯರಾಗಿ

ಪುಟ 4 ಕ್ಕೆ ➤

➢ ಪುಟ 3 ರಿಂದ..... ರಾಷ್ಟ್ರೀಯ ಶಿಕ್ಷಣ ...

ಶ್ರೀಮಂತ ಅನುಭವವಿದ್ದವರು. ಕೆ. ಜೆ. ಅಲ್ಫೋನ್ಸ್, ಕೇಂದ್ರ ಸರಕಾರದಲ್ಲಿ ಸಚಿವರಾದ್ದರಿಂದ ಸಮಿತಿಯನ್ನು ತ್ಯಜಿಸಿದರು ಎಂಬುದನ್ನು ಬಿಟ್ಟರೆ ಮಿಕ್ಕ ಹತ್ತು ಮಂದಿಯೂ ಕರಡು ರಚನೆಯ ಆದ್ಯಂತ ನಿಷ್ಠೆಯಿಂದ ಕೆಲಸ ಮಾಡಿದ್ದಾರೆ. ಮೂರು ವರ್ಷಗಳಲ್ಲಿ ಸಮಿತಿ ಹಲವು ಸಲ ಸಭೆ ಸೇರಿದೆ. ಶಿಕ್ಷಣ ತಜ್ಞರನ್ನು ಮಾತಾಡಿಸಿದೆ. ಮಕ್ಕಳು, ಶಿಕ್ಷಕರು, ಪೋಷಕರ ಜೊತೆ ಸಮಾಲೋಚಿಸಿದೆ. ಸಂವಿಧಾನದ ಚೌಕಟ್ಟನ್ನು ಎಲ್ಲೂ ಮೀರದೆ ಶಿಕ್ಷಣರಂಗದಲ್ಲಿ ತರಬಹುದಾದ ಬದಲಾವಣೆಗಳ ಬಗ್ಗೆ ಸಮಿತಿ ಆಮೂಲಾಗ್ರ ಚಿಂತಿಸಿದೆ. ಶಿಕ್ಷಣದಲ್ಲಿ ಯಾವುದೇ ಬದಲಾವಣೆಯನ್ನು ಸೂಚಿಸಬೇಕಾದರೂ ಮೊದಲು ಅಲ್ಲಿ ಏನೆಲ್ಲ ಸಮಸ್ಯೆಗಳಿವೆ ಎಂಬುದನ್ನು ಪಟ್ಟಿ ಮಾಡಬೇಕಿತ್ತು. ಹೀಗೆ, ಸಮಸ್ಯೆಗಳ ಪಟ್ಟಿ ಮಾಡುವ ಮೂಲಕ ಸಮಿತಿಯ ಕೆಲಸ ಪ್ರಾರಂಭವಾಯಿತು.

### ಸಮಿತಿಯ ಮುಂದಿದ್ದ ಸವಾಲುಗಳು

(1) ನಾವಿನ್ನೂ ಮೆಕಾಲೆ ಶಿಕ್ಷಣ ಪದ್ಧತಿಯ ನೆರಳಲ್ಲೇ ಇದ್ದೇವೆ. ನಾವೇನು ಕಲಿಯಬೇಕು ಎಂಬುದನ್ನು ಸರಕಾರ ನಿರ್ಧರಿಸುತ್ತದೆ. ನಾವು ಅದನ್ನು ಅನುಸರಿಸುತ್ತೇವೆ ಅಷ್ಟೆ. ಕಡ್ಡಾಯ ಶಿಕ್ಷಣ ನೀತಿಯ ಪ್ರಕಾರ ಒಂದು ಮಗು ಪ್ರಾಥಮಿಕ ಹಂತದ ಶಿಕ್ಷಣವನ್ನು ಪಡೆಯಲೇಬೇಕು. ನಾವು ಆ ಮಗು ಎಷ್ಟು ವರ್ಷ ಶಾಲೆಯಲ್ಲಿ ಕಳೆಯುತ್ತದೆ ಎಂಬುದರತ್ತ ಗಮನ ಕೊಡುತ್ತೇವೆಯೇ ವಿನಾ ನಿಜವಾಗಿಯೂ ಆ ಮಗುವಿಗೆ ಶಿಕ್ಷಣ, ಸಂಸ್ಕಾರ ಸಿಗುತ್ತದೆಯೇ ಎಂಬುದರತ್ತ ಆಸಕ್ತಿ ವಹಿಸುವುದಿಲ್ಲ. ಅಂದರೆ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುವ ಕೆಲಸವಷ್ಟೇ ಆಗುತ್ತಿದೆ.

(2) ಮಗು ಮೂರನೇ ವರ್ಷಕ್ಕೆ ಕಾಲಿಡುವ ಹೊತ್ತಿಗೆ ಅದರ ಮಿದುಳಿನ 85% ಬೆಳವಣಿಗೆ ಆಗಿರುತ್ತದೆ. ಆದರೆ ನಮ್ಮ ಸಾಂಪ್ರದಾಯಿಕ ಶಿಕ್ಷಣ ಪ್ರಾರಂಭ ವಾಗುವುದು 6ನೇ ವರ್ಷದಲ್ಲಿ. ಹೊಸ ವಿಷಯಗಳನ್ನು ಕಲಿಯಲು ಸಿದ್ಧವಾದ ಮಗುವಿನ ಅಮೂಲ್ಯ ಮೂರು ವರ್ಷಗಳು ಯಾವ ಪ್ರಯೋಜನವಿಲ್ಲದೆ ಕಳೆದುಹೋಗುತ್ತವೆ.

(3) ಶಿಕ್ಷಣ ಎಂದರೆ ಉರುಹೊಡೆಯುವುದು ಎಂದಾಗಿದೆ. ಸ್ವತಂತ್ರವಾಗಿ ಯೋಚಿಸುವ, ತರ್ಕಿಸುವ ಅವಕಾಶಗಳನ್ನು ವಿದ್ಯಾರ್ಥಿಗಳಿಗೆ ಕೊಡಲಾಗುತ್ತಿಲ್ಲ. ಪಠ್ಯ, ಪರೀಕ್ಷೆ, ಮೌಲ್ಯಮಾಪನ ಎಲ್ಲದರಲ್ಲೂ ಏಕತಾನತೆ ಇದೆ.

(4) ಮಗುವಿಗೆ ಸಣ್ಣ ವಯಸ್ಸಿನಲ್ಲಿ ಮೂರ್ನಾಲ್ಕು ಭಾಷೆಗಳನ್ನು ಕಲಿಯುವ ಸಾಮರ್ಥ್ಯವಿರುತ್ತದೆ. ಆದರೆ ನಮ್ಮ ಸದ್ಯದ ಶಿಕ್ಷಣ ಪದ್ಧತಿ ಅದನ್ನು ಪರಿಗಣಿಸುವುದೇ ಇಲ್ಲ. ಅಲ್ಲದೆ, ಬರವಣಿಗೆಯಷ್ಟೇ ಭಾಷಾ ಸಾಮರ್ಥ್ಯವನ್ನು ಪರೀಕ್ಷಿಸುವ ಮಾಧ್ಯಮ ಎಂಬಂತಾಗಿದೆ.

(5) ಪ್ರಾಥಮಿಕ ಶಾಲೆಯ ಮಟ್ಟದಲ್ಲಿ ಮಕ್ಕಳ ಹಾಜರಾತಿ ಹೆಚ್ಚಿದ್ದರೂ ಮುಂದಕ್ಕೆ ಹೋದಂತೆಲ್ಲ ಅದು ಕಡಿಮೆಯಾಗುತ್ತದೆ. ಪ್ರಾಥಮಿಕ ಶಾಲೆ ಸೇರಿದ ನೂರು ಮಕ್ಕಳಲ್ಲಿ ಕೇವಲ 50 ಮಕ್ಕಳು ಮಾತ್ರ 11–12ನೇ ತರಗತಿಗೆ ಸೇರುತ್ತಾರೆ. ಮಕ್ಕಳು ಶಾಲೆ ಬಿಡಲು ಕಾರಣ ಏನು, ಯಾವುದೇ ಚಿಂತನೆ ನಡೆದಿಲ್ಲ. ಮಕ್ಕಳನ್ನು ಮರಳಿ ಶಾಲೆಗೆ ಕರೆತರಲು ಯಾವ ಯೋಜನೆಯನ್ನೂ ಹಾಕಲಾಗಿಲ್ಲ.

(6) ಪದವಿ ಮಟ್ಟದ ಶಿಕ್ಷಣದಲ್ಲಿ ವಿದ್ಯಾರ್ಥಿಗಳಿಗೆ ಹಲವಾರು ಶಾಖೆಗಳಲ್ಲಿ ತಮಗಿಷ್ಟವಾದ ಕೋರ್ಸ್/ವಿಷಯ ಆರಿಸುವ ಅವಕಾಶವಿಲ್ಲ. ಅಂದರೆ, ಭೌತವಿಜ್ಞಾನ, ಇತಿಹಾಸ, ಅಕೌಂಟೆನ್ಸಿ – ಇಂಥ ಆಯ್ಕೆಗಳನ್ನೂ – ವಿದ್ಯಾರ್ಥಿ ಬಯಸಿದರೆ – ಕಲಿಯಲು ಅವಕಾಶ ಸದ್ಯಕ್ಕೆ ಇಲ್ಲ. ಹಾಗೆಯೇ ಒಂದು ನಿರ್ದಿಷ್ಟ ಅವಧಿಯೊಳಗೆ ಪದವಿ ಪಡೆಯಬೇಕು ಎಂಬ ಒತ್ತಡವೂ ಇದೆ. ಪದವಿ ತರಗತಿ ಯನ್ನು ಅರ್ಧದಲ್ಲಿ ತೊರೆದವರು ಮರಳಿ ಸೇರಿಕೊಳ್ಳಬೇಕಾದರೆ ಪ್ರಾರಂಭದಿಂದ ಎಲ್ಲವನ್ನೂ ಕಲಿಯಬೇಕು ಎಂಬ ನಿರ್ಬಂಧ ಹಾಕಲಾಗಿದೆ.

(7) ಪ್ರಾಥಮಿಕ, ಪ್ರೌಢ ಶಾಲೆಗಳ ಹಂತದಲ್ಲಿ ಮಕ್ಕಳಿಗೆ ಕಲಿಸುವ ಶಿಕ್ಷಕರ ಜ್ಞಾನ, ಕೌಶಲ ಕಡಿಮೆ ಇದೆ. ಯೂನಿವರ್ಸಿಟಿಯಲ್ಲಿ ಪಾಠ ಮಾಡಲು ಪಿಎಚ್‌ಡಿ ಇರಬೇಕು, ಪ್ರೌಢಶಾಲೆಯಲ್ಲಿ ಕಲಿಸಲು ಪದವಿ ಇದ್ದರೆ ಸಾಕು ಎಂಬ ತಾರತಮ್ಯವಿದೆ.

(8) ಮಗುವಿನ ಸರ್ವತೋಮುಖ ಬೆಳವಣಿಗೆಯೇ ಶಿಕ್ಷಣದ ಉದ್ದೇಶ ಎಂದಾದರೆ ಪಠ್ಯ, ಪಠ್ಯೇತರ ಎಂಬ ವರ್ಗೀಕರಣ ಯಾಕಿದೆ? ಪಠ್ಯೇತರ ಎಂದು ಗುರುತಿಸಲ್ಪಡುವ ಎಲ್ಲವೂ ಪಠ್ಯಕ್ರಮವೇ ಎಂದು ಯಾಕೆ ಗುರುತಿಸಿಲ್ಲ?

(9) ನಮ್ಮಲ್ಲಿ ಲಕ್ಷಾಂತರ ಮಂದಿ ಪದವಿ, ಸ್ನಾತಕೋತ್ತರ ಪದವಿಗಳನ್ನು ಪಡೆಯುತ್ತಾರಾದರೂ ಸಂಶೋಧನಾ ಕ್ಷೇತ್ರಕ್ಕೆ ಬರುವವರ ಸಂಖ್ಯೆ ಬೆರಳೆಣಿಕೆಯಷ್ಟು. ಸಂಶೋಧನೆಯನ್ನು ಯಾರೂ ಕೆರಿಯರ್ ಆಯ್ಕೆ ಎಂದು ಪರಿಗಣಿಸಿಯೇ ಇಲ್ಲ. ಹೆಚ್ಚಿನ ವೇತನ ಪಡೆಯುವುದಕ್ಕೆ ಅಥವಾ ಬಡ್ತಿಗೆ ಬೇಕಾಗಿ ಸದ್ಯದ ಸಂಶೋಧನೆಗಳು ನಡೆಯುತ್ತಿವೆ. ದೇಶದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಸರಿಯಾದ ಮೌಲ್ಯಾಂಕನ ಕೂಡ ಆಗುತ್ತಿಲ್ಲ.

ಪ್ರಮುಖವಾಗಿ ಇಷ್ಟು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು ಸಮಿತಿಯ ಜವಾಬ್ದಾರಿಯಾಗಿತ್ತು. ಮೂರು ವರ್ಷಗಳಲ್ಲಿ ಹತ್ತು ಹಲವಾರು ಚರ್ಚೆ, ಸಭೆ, ಸಂವಾದ, ಅಧ್ಯಯನಗಳನ್ನು ನಡೆಸಿದ ಸಮಿತಿ ಈ ಮುಂದಿನ ಕ್ರಮಗಳನ್ನು ಶಿಫಾರಸು ಮಾಡಿದೆ:

(1) ಇದುವರೆಗೆ 6ರಿಂದ 14 ವರ್ಷದವರೆಗೆ ಕಡ್ಡಾಯ ಶಿಕ್ಷಣ ಕೊಡಬೇಕು ಎಂಬ ನಿಯಮವಿತ್ತು. ಅದನ್ನು ಸಡಿಲಿಸಿ 3ರಿಂದ 18 ವಯಸ್ಸಿಗೆ ಎಂದು ಬದಲಾಯಿಸಬೇಕಿದೆ. ಮಕ್ಕಳ ಬೌದ್ಧಿಕ ಸಾಮರ್ಥ್ಯ 3ನೇ ವರ್ಷಕ್ಕೇ ಗಮನೀಯ ಪ್ರಮಾಣದಲ್ಲಿರುವುದರಿಂದ ಆ ವರ್ಷದಿಂದಲೇ ಮಕ್ಕಳಿಗೆ ಶಿಕ್ಷಣ ಕೊಡಲು ಪ್ರಾರಂಭಿಸಬೇಕು. ಮಕ್ಕಳಿಗೆ ಆ ವಯಸ್ಸಿನಲ್ಲಿ ಅಮೂರ್ತ ಜ್ಞಾನ ಸಂಪಾದಿಸುವ ಸಾಮರ್ಥ್ಯ ಇರುವುದಿಲ್ಲವಾದರೂ ಸಂಖ್ಯೆಗಳು, ಭಾಷೆ ಮುಂತಾದ ಅಂಶಗಳನ್ನು ಕಲಿಯಲು ಬೇಕಾದಷ್ಟು ಮಿದುಳು ಬೆಳೆದಿರುತ್ತದೆ. 3 ವರ್ಷದ ಮಕ್ಕಳಿಗೆ ಭಾಷೆ ಗಳನ್ನು ಕಲಿಸುವುದು ಸುಲಭ. ಆದ್ದರಿಂದ ದೇಶದ ಎಲ್ಲ ಅಂಗನವಾಡಿಗಳನ್ನೂ ಆಧುನಿಕಗೊಳಿಸಬೇಕು. ದೇಶದ ಪ್ರತಿ ಮಗುವೂ 3ನೇ ವರ್ಷಕ್ಕೆ ಅಂಗನವಾಡಿಗಳಲ್ಲಿ

ಪುಟ 5 ಕ್ಕೆ ➢

## ಗಣಿತ ಮತ್ತು ಭಾಷೆಗೆ ಒತ್ತು

- ಮಕ್ಕಳಲ್ಲಿ ಭಾಷೆ ಮತ್ತು ಗಣಿತಕ್ಕೆ ಸಂಬಂಧಿಸಿದ ಸಾಮರ್ಥ್ಯವನ್ನು ಉತ್ತಮಪಡಿಸುವುದು ಅತ್ಯಂತ ತುರ್ತಿನ ರಾಷ್ಟ್ರೀಯ ಆದ್ಯತೆ. ಇದರಲ್ಲಿ ಯಾವುದೇ ರಾಜಿಗೂ ಅವಕಾಶವಿಲ್ಲ – ಎಂದು ಹೇಳಿರುವ ಸಮಿತಿ ಈ ಕೆಳಗಿನ ಅಂಶಗಳನ್ನು ಶಿಫಾರಸು ಮಾಡಿದೆ:
- 1, 2ನೇ ತರಗತಿಗಳಲ್ಲಿ ಗಣಿತ ಮತ್ತು ಓದುವಿಕೆಗೆ ಪ್ರತ್ಯೇಕ ಅವಧಿಗಳನ್ನು ಮೀಸಲಿಡಿ. ಹಾಗೆಯೇ 4, 5ನೇ ತರಗತಿಗಳಲ್ಲಿ ಬರವಣಿಗೆಗೆ ಪ್ರತ್ಯೇಕ ಅವಧಿ ಇರಲಿ. ಪೂರ್ವಾಹ್ನ ಪ್ರಶಸ್ತ.
- ಭಾಷಾ ಸಪ್ತಾಹ, ಗಣಿತ ಸಪ್ತಾಹ ಕಾರ್ಯಕ್ರಮಗಳು ನಡೆಯಲಿ. ಭಾಷೆ ಮತ್ತು ಗಣಿತಕ್ಕೆ ಸಂಬಂಧಿಸಿದ ಅನೇಕ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಳ್ಳುವಂತಾಗಲಿ.
- ನಿಯಮಿತವಾಗಿ ಭಾಷಾ ಮೇಳ, ಗಣಿತ ಮೇಳಗಳನ್ನು ಶಾಲೆಗಳು ಆಯೋಜಿಸಲಿ. ವಿದ್ಯಾರ್ಥಿಗಳು ತಮ್ಮ ಭಾಷೆ ಮತ್ತು ಗಣಿತ ಪ್ರತಿಭೆಯನ್ನು ಪ್ರದರ್ಶಿಸಲು ಇದೊಂದು ವೇದಿಕೆಯಾಗಲಿ. ಶಿಕ್ಷಕರು, ಮಕ್ಕಳ ಪೋಷಕರು ಕೂಡ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿ.
- ಸಾಹಿತಿಗಳ/ಗಣಿತಜ್ಞರ ಜನ್ಮದಿನಗಳಂದು ಶಾಲೆಯಲ್ಲಿ ವಿಶೇಷ ಅಸೆಂಬ್ಲಿ ಆಯೋಜಿಸಬಹುದು. ಗಣ್ಯರ ಜೀವನದ ಮಹತ್ವವನ್ನು ಮನಗಾಣಿಸುವ ಕಾರ್ಯಕ್ರಮಗಳನ್ನು ಅಂದು ವಿದ್ಯಾರ್ಥಿಗಳು ನಡೆಸಿಕೊಡಬಹುದು.
- ಶಾಲೆಯಲ್ಲಿ ಗ್ರಂಥಾಲಯ ಒಂದು ಪ್ರಮುಖ ಆಕರ್ಷಣೆಯ ಕೇಂದ್ರವಾಗಬೇಕು. ಕತೆ ಹೇಳುವುದು, ನಾಟಕ, ಗುಂಪು ಓದು, ಬರವಣಿಗೆ, ಮಹತ್ವದ ವ್ಯಕ್ತಿಗಳ ಬರವಣಿಗೆಯ ಪ್ರದರ್ಶನ – ಹೀಗೆ ಹತ್ತು ಹಲವು ಚಟುವಟಿಕೆಗಳನ್ನು ಗ್ರಂಥಾಲವನ್ನು ಕೇಂದ್ರವಾಗಿಟ್ಟುಕೊಂಡು ಆಯೋಜಿಸಬಹುದು.
- ಪ್ರತಿ ವಾರವೂ ಒಂದು ದಿನ ಅಥವಾ ಒಂದು ಅವಧಿ ಪಝಲ್‌ಗಳನ್ನು ಬಿಡಿಸುವುದಕ್ಕೆ ಮೀಸಲಾಗಿರಲಿ. ಪಝಲ್‌ಗಳು ವಿದ್ಯಾರ್ಥಿಗಳ ತಾರ್ಕಿಕ ಮತ್ತು ಗಣಿತ ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಹಾಗೆಯೇ ಕ್ಲಾಸ್‌ರೂಮ್ ಗಣಿತ ಮತ್ತು ನಿಜ ಜೀವನದಲ್ಲಿ ಗಣಿತ – ಇವೆರಡರ ನಡುವಿನ ಸಂಬಂಧವನ್ನು ಸ್ಪಷ್ಟಪಡಿಸುವ ಚಟುವಟಿಕೆಗಳನ್ನು ಕೂಡ ನಿಯಮಿತವಾಗಿ ಶಾಲೆಗಳು ಆಯೋಜಿಸಬೇಕು.

➤ ಪುಟ 4 ರಿಂದ..... ರಾಷ್ಟ್ರೀಯ ಶಿಕ್ಷಣ ...

ಕಲಿಕೆಯ ಪ್ರಾರಂಭದ ಹೆಜ್ಜೆಗಳನ್ನು ಇಡಲು ಅವಕಾಶವಾಗಬೇಕು. ಎಲ್ಲ ಅಂಗನವಾಡಿ ಕಾರ್ಯಕರ್ತೆಯರಿಗೂ ವಿಶೇಷ ತರಬೇತಿ ಸಿಗಬೇಕು.

(2) ಈಗ ಇರುವ 7+3+2 ವರ್ಷ ಎಂಬ ಶಾಲಾ ಪದ್ಧತಿಯನ್ನು ತೆಗೆದುಹಾಕಿ 5+3+3+4 ಎಂಬ ಹೊಸ ಪದ್ಧತಿಯನ್ನು ಶಿಕ್ಷಣ ರಂಗದಲ್ಲಿ ತರಬೇಕು. ಶಾಲಾಪೂರ್ವ ಮೂರು ವರ್ಷಗಳು ಮತ್ತು 1, 2ನೇ ತರಗತಿ – ಒಟ್ಟು 5 ವರ್ಷ; 3, 4, 5ನೇ ತರಗತಿಗಳು – ಒಟ್ಟು 3 ವರ್ಷ; 6, 7, 8ನೇ ತರಗತಿಗಳು – ಒಟ್ಟು 3 ವರ್ಷ, 9, 10, 11, 12ನೇ ತರಗತಿಗಳು – ಒಟ್ಟು 4 ವರ್ಷ. ಹಾಗೆಂದ ಮಾತ್ರಕ್ಕೆ ಶಾಲೆ-ಕಾಲೇಜುಗಳನ್ನು ಒಡೆದು ಕಟ್ಟಿ ಎಂದು ಸಮಿತಿ ಹೇಳುತ್ತಿಲ್ಲ. ವಿದ್ಯಾರ್ಥಿಗಳ ಪಠ್ಯಕ್ರಮ ಈ ವಿಭಾಗೀಕರಣವನ್ನು ಗಮನದಲ್ಲಿರಿಸಿ ಕೊಂಡು ರಚನೆಯಾದರೆ ಸಾಕು.

(3) 2016–17ರ ವರದಿಯೊಂದರ ಪ್ರಕಾರ ನಮ್ಮ ದೇಶದಲ್ಲಿ ವಿದ್ಯಾರ್ಥಿಗಳ ಹಾಜರಾತಿ, ಪ್ರೈಮರಿ ಶಾಲೆಗಳಲ್ಲಿ 95.1%, ಹೈಯರ್ ಪ್ರೈಮರಿ ಶಾಲೆಗಳಲ್ಲಿ 90.7%, ಪ್ರೌಢ ಶಾಲೆಗಳಲ್ಲಿ 79.3% ಮತ್ತು ಪಿಯುಸಿ (ತತ್ಸಮಾನ) ತರಗತಿಗಳಲ್ಲಿ 51.3% ಇದೆ. ಅಂದರೆ ಪ್ರೈಮರಿಯಲ್ಲಿ ಸೇರಿದ್ದ 100 ಮಕ್ಕಳ ಪೈಕಿ ಕೇವಲ ಅರ್ಧದಷ್ಟು ಮಾತ್ರವೇ ಪಿಯುಸಿ/ತತ್ಸಮಾನ ಕೋರ್ಸುಗಳವರೆಗೆ ಶಿಕ್ಷಣ ಮುಂದುವರಿಸುತ್ತಿದ್ದಾರೆ. ಅರ್ಧದಷ್ಟು ಮಂದಿ ಶಾಲೆಯಿಂದ ಡ್ರಾಪ್ ಔಟ್ ಆಗುತ್ತಿದ್ದಾರೆ. 6ರಿಂದ 18 ವರ್ಷದೊಳಗಿನ ಮಕ್ಕಳ ಪೈಕಿ ನಮ್ಮ ದೇಶದಲ್ಲಿ ಆರೂವರೆ ಕೋಟಿಯಷ್ಟು ಮಂದಿ ಶಾಲಾಶಿಕ್ಷಣದಿಂದ ಹೊರಗಿದ್ದಾರೆ. ಇವರನ್ನು ಶಾಲೆಯ ವೃತ್ತದೊಳಗೆ ತರುವುದು ಹೇಗೆ ಎಂಬುದರ ಬಗ್ಗೆ ಗಂಭೀರ ಚಿಂತನೆ ನಡೆಸಬೇಕಾಗಿದೆ. ಸಮಿತಿ ಮಾಡಿರುವ ಶಿಫಾರಸುಗಳು:

(3ಎ) ವಿದ್ಯಾರ್ಥಿಗೆ ಶಾಲೆ ಬಿಡುವ ಮತ್ತು ಸೇರುವ ವಿಷಯದಲ್ಲಿ ಹೆಚ್ಚು ಸ್ವಾತಂತ್ರ್ಯ ಬೇಕು. ಒಮ್ಮೆ ಶಾಲೆ ಬಿಟ್ಟರೂ ಒಂದೆರಡು ವರ್ಷಗಳಲ್ಲಿ ಮತ್ತೆ ಸೇರಿ, ತಾನು ಹಿಂದೆ ಯಾವ ಮಟ್ಟದಲ್ಲಿ ಓದು ನಿಲ್ಲಿಸಿದ್ದನೋ ಅಲ್ಲಿಂದ ಮುಂದಕ್ಕೆ ಓದಲು ವಿದ್ಯಾರ್ಥಿಗೆ ಅನುವು ಮಾಡಬೇಕು.

(3ಬಿ) ಪಠ್ಯ/ಪಠ್ಯೇತರ ಎಂಬ ವರ್ಗೀಕರಣ ಮಾಡದೆ ಪಠ್ಯೇತರ ಎಂದು ಈಗ ಗುರುತಿಸಿಕೊಳ್ಳುತ್ತಿರುವ ಕಲಾಭ್ಯಾಸ, ಆಟ, ಸಾಮಾಜಿಕ ಚಟುವಟಿಕೆ ಎಲ್ಲವೂ ಪಠ್ಯಕ್ರಮದ ಚೌಕಟ್ಟಿನೊಳಗೇ ಬರಬೇಕು.

(3ಸಿ) ವಿದ್ಯಾರ್ಥಿ ಒಂದು ವರ್ಷದಲ್ಲಿ ಒಂದು ತರಗತಿ ಮುಗಿಸಲೇ ಬೇಕು ಎಂದು ಒತ್ತಡ ಹಾಕದೆ ಅವನ ಕಲಿಕಾ ಸಾಮರ್ಥ್ಯಕ್ಕೆ ತಕ್ಕಂತೆ ಓದು ಮುಂದುವರೆಸುವ ಆಯ್ಕೆ ಕೊಡಬೇಕು.

(3ಡಿ) ಪಠ್ಯಕ್ರಮದಲ್ಲಿ ಅನಗತ್ಯವಾಗಿ ತುರುಕಿರುವ ಅನವಶ್ಯಕ ವಿಷಯಗಳ ಸಂತೆಯನ್ನು ಕಡಿಮೆ ಮಾಡಿ, ವಿದ್ಯಾರ್ಥಿ ಅತ್ಯಗತ್ಯವಾಗಿ ಕಲಿಯಲೇಬೇಕಾಗಿರುವ ಅಂಶಗಳತ್ತ ಹೆಚ್ಚು ಗಮನ ಕೇಂದ್ರೀಕರಿಸಬೇಕು.

ಮಕ್ಕಳು ಶಾಲೆ ಬಿಡುವ ಅಥವಾ ಮುಂದುವರೆಸದಿರುವ ಪರಿಸ್ಥಿತಿಗೆ ಒಂದು ಕಾರಣ, ಶಾಲೆಗಳ ಲಭ್ಯತೆ ಇಲ್ಲದೆ ಇರುವುದು. ಉದಾಹರಣೆಗೆ ದೇಶದ ಪ್ರತಿ ಮಗುವಿಗೂ ತನ್ನ ಪರಿಸರದಲ್ಲೇ ಪ್ರಾಥಮಿಕ ಅಥವಾ ಪೂರ್ವಪ್ರಾಥಮಿಕ ಶಿಕ್ಷಣ ಸಿಗುವಂತೆ ಶಾಲೆಗಳಿವೆ. ಆದರೆ ಪ್ರಾಥಮಿಕ ಶಾಲೆಗಳ ಸಂಖ್ಯೆಗೆ ತಕ್ಕಂತೆ ಮುಂದಿನ ತರಗತಿಗಳ ಶಾಲೆಗಳ ಲಭ್ಯತೆ ಇಲ್ಲ. ದೇಶದಲ್ಲಿರುವ ಪ್ರತಿ ನೂರು ಪ್ರಾಥಮಿಕ ಶಾಲೆಗಳಿಗೆ 50 ಹಿರಿಯ ಪ್ರಾಥಮಿಕ, 20 ಸೆಕೆಂಡರಿ ಮತ್ತು 9 ಹೈಯರ್ ಸೆಕೆಂಡರಿ ಶಾಲೆಗಳಿವೆ. ಈ ಸ್ಥಿತಿಯನ್ನು ಬದಲಾಯಿಸದೆ ಹೋದರೆ ಎಲ್ಲ ವಿದ್ಯಾರ್ಥಿಗಳನ್ನು ಶಿಕ್ಷಣದ ಛತ್ರಿಯಡಿ ತರಲು ಸಾಧ್ಯವಿಲ್ಲ. ಹಾಗಾಗಿ ಪ್ರೈಮರಿ ಶಾಲೆಗಳ ಸಂಖ್ಯೆಗೆ ತಕ್ಕಂತೆ ಉಳಿದ ತರಗತಿಗಳ ಶಾಲೆಗಳನ್ನೂ ನಿರ್ಮಿಸಬೇಕು ಮತ್ತು ಈ ಎಲ್ಲ ತರಗತಿಗಳೂ ಇರುವ ಶಾಲೆಗಳನ್ನು ಒಟ್ಟಾಗಿ ಒಂದು ಕಾಂಪ್ಲೆಕ್ಸ್ ಮಾಡಬೇಕು. ಅಂದರೆ, ಒಂದೇ ಸ್ಥಳದಲ್ಲಿ ಮಕ್ಕಳಿಗೆ ಅಂಗನವಾಡಿಯಿಂದ 12ನೇ ತರಗತಿವರೆಗಿನ ಎಲ್ಲ ಶಿಕ್ಷಣವೂ ಸಿಗಬೇಕು.

(4) ಇಂದಿನ ಶಿಕ್ಷಣ ಪದ್ಧತಿ ಏಕತಾನತೆಯಿಂದ ಬಳಲುತ್ತಿದೆ. ಪಾಠ, ನೋಟ್ಸ್, ಪರೀಕ್ಷೆ ಎಂಬ ವಿಷವರ್ತುಲದಲ್ಲಿ ಬಿದ್ದು ನರಳುತ್ತಿದೆ. ಈ ವ್ಯವಸ್ಥೆಯನ್ನು ಬದಲಿಸುವ ಕಡೆ ಯಾರೂ ಗಮನ ಹರಿಸುತ್ತಿಲ್ಲ. ವಿದ್ಯಾರ್ಥಿಯ ಅನಿಸಿಕೆಗೆ ಬೆಲೆಯೇ ಇಲ್ಲ. ಶಿಕ್ಷಣ ಇಂದು ಸಿಲಬಸ್ ಸೆಂಟ್ರಿಕ್ ಅಂದರೆ ಪಠ್ಯಕ್ರಮ ಕೇಂದ್ರಿತ ಆಗಿದೆ. ಇದು ಸ್ಟೂಡೆಂಟ್ ಸೆಂಟ್ರಿಕ್ ಆಗಬೇಕು. ವಿದ್ಯಾರ್ಥಿಯ ಸಾಮರ್ಥ್ಯಕ್ಕೆ ತಕ್ಕಂತೆ ವಿಷಯ ಪ್ರಸ್ತುತಿ, ಕೇವಲ ಬರವಣಿಗೆಯಲ್ಲಲ್ಲದೆ ಬೇರೆ ಬೇರೆ ರೀತಿಯಲ್ಲಿ ವಿದ್ಯಾರ್ಥಿಯ ಬೌದ್ಧಿಕ ಪರೀಕ್ಷೆ, ಹೆಚ್ಚು ಹೆಚ್ಚು ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಮೂಲಕ ಮಗುವಿನ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು – ಇವುಗಳಿಗೆ ಸಮಿತಿ ಯಿಂದ ಹೆಚ್ಚು ಒತ್ತು ಬಿದ್ದಿದೆ.

ಇನ್ನು, ಸಮಿತಿ ವಿದ್ಯಾರ್ಥಿಗಳನ್ನು ರೂಪಿಸುವ ಶಿಕ್ಷಕರ ವಿಷಯದಲ್ಲಿಯೂ ಪರಾಮರ್ಶೆ ನಡೆಸಿದೆ. ಈಗ ಪ್ರೈಮರಿ ಶಾಲೆಯಲ್ಲಿ ಪಾಠ ಮಾಡುವವರು ಕೆಳಗಿನವರು, ಯೂನಿವರ್ಸಿಟಿಯಲ್ಲಿ ಪಾಠ ಮಾಡುವವರು ಉನ್ನತರು ಎಂಬ ಭಾವ ಇದೆ. ಇದು ಸರಿಯಲ್ಲ. ಯಾವ ಮಟ್ಟದಲ್ಲಿ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರೂ ಅವರಿಗಿರಬೇಕಾದ ಗೌರವ ಒಂದೇ. ಪ್ರಾಥಮಿಕ ಹಂತದಲ್ಲಿ

ಪುಟ 6 ಕ್ಕೆ ➤

**ನ್ಯಾಷನಲ್ ಟ್ಯೂಟರ್ಸ್ ಪ್ರೋಗ್ರಾಮ್ (ಎನ್‌ಟಿಪಿ)**

**ಸಮಿತಿ ಶಿಕ್ಷಣದ ಆಮೂಲಾಗ್ರ ಬದಲಾವಣೆಗೆ ಶಿಫಾರಸನ್ನೇನೋ ಮಾಡಿದೆ. ಆದರೆ ಅದಕ್ಕೆ ತಕ್ಕಂತೆ ಶಿಕ್ಷಕರನ್ನು ತಯಾರು ಮಾಡುವುದು ಹೇಗೆ? ಅದಕ್ಕಾಗಿ ಸಮಿತಿ ಹೇಳಿರುವ ಹಲವು ಸಲಹೆಗಳಲ್ಲಿ ಒಂದು: ಶಾಲೆಯಲ್ಲೇ ಅತ್ಯುತ್ತಮ ಶಿಕ್ಷಕರನ್ನು ಆರಿಸಿ ಅವರಿಂದ ಉಳಿದ (ಜೂನಿಯರ್) ಶಿಕ್ಷಕರಿಗೆ ಪಾಠ ಮಾಡಿಸುವುದು ಅಥವಾ ಕಲಿಕೆಯ ವಿಧಾನವನ್ನು ಹೇಳಿಸುವುದು. ಬದಲಾವಣೆಯ ಶಕೆ ಶುರುವಾಗಬೇಕಾದ್ದು ಇಂಥ ಸಣ್ಣ ಪ್ರಯತ್ನಗಳಿಂದಲೇ. ಹಾಗೆಯೇ ಬದಲಾಗುತ್ತಿರುವ ಜಗತ್ತಿಗೆ ತಕ್ಕಂತೆ ಶಿಕ್ಷಕರು ಕೂಡ ಪ್ರತಿ ದಿನವೂ ಅಪ್‌ಡೇಟ್ ಆಗುತ್ತಲೇ ಇರಬೇಕು. ಅದಕ್ಕಾಗಿ ಶಿಕ್ಷಕರಿಗೆ ಶೈಕ್ಷಣಿಕ ಮಾಹಿತಿ, ಚಟುವಟಿಕೆ ತುಂಬಿರುವ ಕಂಪ್ಯೂಟರ್, ಟ್ಯಾಬ್ಲೆಟ್, ಸ್ಮಾರ್ಟ್‌ಫೋನ್ ಮತ್ತು ಅಗತ್ಯವಾಗುವ ಎಲ್ಲ ತಂತ್ರಾಂಶಗಳನ್ನು ಸರಕಾರ ಒದಗಿಸಿಕೊಡಬೇಕು ಎಂದೂ ಸಮಿತಿ ಹೇಳಿದೆ.**

**ಸ್ವಾಯತ್ತ ಕಾಲೇಜು, ಸ್ವತಂತ್ರ ವಿಶ್ವವಿದ್ಯಾಲಯ**

**ನಮ್ಮ ದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಸ್ವರೂಪ ಹೇಗೆ ಪೂರ್ಣವಾಗಿ ಬದಲಾಗಬೇಕೋ ಹಾಗೆಯೇ ವಿಶ್ವವಿದ್ಯಾಲಯಗಳ ಕಾರ್ಯಸ್ವರೂಪ ಕೂಡ ಬದಲಾಗಬೇಕಿದೆ. ಸದ್ಯಕ್ಕೆ ದೇಶದಲ್ಲಿ 800 ವಿಶ್ವವಿದ್ಯಾಲಯಗಳು, 40,000 ಕಾಲೇಜುಗಳಿವೆ. ಇದು ಸದ್ಯದ ಅಗತ್ಯಕ್ಕೆ ಏನೇನೂ ಸಾಲದು. 130 ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ ಇದು ಬಹಳ ಸಣ್ಣ ಸಂಖ್ಯೆ. ಈ ಕಾಲೇಜುಗಳ ಪೈಕಿ 40%ನಷ್ಟು ಸಂಸ್ಥೆಗಳು ಕೇವಲ ಒಂದು ವಿಷಯದಲ್ಲಿ ಮಾತ್ರ ಪದವಿ ಕೊಡುತ್ತಿವೆ! 20%ನಷ್ಟು ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 100ಕ್ಕಿಂತ ಕಡಿಮೆ. ದೇಶದಲ್ಲಿ, 3000ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಕಾಲೇಜುಗಳ ಪ್ರಮಾಣ 4% ಮಾತ್ರ! ಇನ್ನು ಸರಿಯಾದ ಶಿಕ್ಷಕ ವರ್ಗ ಇಲ್ಲದ ಕಾಲೇಜುಗಳ ಅಂಕಿ-ಅಂಶ ತೆಗೆಯಲು ಹೋದರೆ ಅದೇ ಕೆಲವು ಸಾವಿರಗಳಷ್ಟಾಗುತ್ತದೆ. ಈ ಎಲ್ಲ ಅಪಸವ್ಯಗಳೂ ಕೊನೆಯಾಗಬೇಕು. ಸರಿಯಾದ ಮೂಲಭೂತ ವ್ಯವಸ್ಥೆಗಳಿಲ್ಲದ ಸಂಸ್ಥೆಗೆ ಕಾಲೇಜು, ವಿಶ್ವವಿದ್ಯಾಲಯ ಮುಂತಾದ ಮಾನ್ಯತೆ ಕೊಡಬಾರದು. ಒಂದಕ್ಕಿಂತ ಹೆಚ್ಚು ವಿಷಯಗಳನ್ನು ಕಲಿಸದ ಶಿಕ್ಷಣ ಸಂಸ್ಥೆಗಳನ್ನು ಅನೂರ್ಜಿತಗೊಳಿಸಬೇಕು. ಸ್ವಾಯತ್ತ ಕಾಲೇಜುಗಳ ಸಂಖ್ಯೆ ಹೆಚ್ಚಿಸಬೇಕು. ಕಾಲೇಜುಗಳ ಮೇಲೆ ವಿಶ್ವವಿದ್ಯಾಲಯಗಳ ಹಿಡಿತವನ್ನು ತಪ್ಪಿಸಿ, ಕಾಲೇಜುಗಳ ನಡುವಲ್ಲಿ ಗುಣಾತ್ಮಕ ಸ್ಪರ್ಧೆ ಏರ್ಪಡುವಂತೆ ಮಾಡಬೇಕು. 2030ರ ವೇಳೆಗೆ ದೇಶದಲ್ಲಿ ವಿಶ್ವವಿದ್ಯಾಲಯಗಳು ಮತ್ತು ಸ್ವಾಯತ್ತ ಕಾಲೇಜುಗಳು – ಈ ಎರಡೇ ವ್ಯವಸ್ಥೆ ಇರಬೇಕು. ವಿಶ್ವವಿದ್ಯಾಲಯದ ಮಾನ್ಯತೆ ಪಡೆದು ಕಾರ್ಯನಿರ್ವಹಿಸುವ ಕಾಲೇಜುಗಳು ಇರಬಾರದು.**

**ಕೆಲವು ಗಮನಾರ್ಹ ಸಲಹೆಗಳು**

- **ಸಂಗೀತ ಏಕಾಗ್ರತೆ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಶಾಲೆಗಳಲ್ಲಿ ಸಂಗೀತ ಕಲಿಕೆಗೆ ಹೆಚ್ಚಿನ ಅವಕಾಶವಿರಲಿ.**
- **ಎಲ್ಲ ಪ್ರಾಥಮಿಕ, ಪ್ರೌಢ ಶಾಲೆಗಳಲ್ಲೂ ವಿದ್ಯಾರ್ಥಿ:ಶಿಕ್ಷಕ ಅನುಪಾತ 30:1 ಅಥವಾ ಅದಕ್ಕಿಂತ ಕಡಿಮೆ ಇರಬೇಕು.**
- **ವಿದ್ಯಾರ್ಥಿಗಳು ಅಭಿಜಾತ (ಕ್ಲಾಸಿಕಲ್) ಭಾಷೆಗಳಲ್ಲಿ ಎರಡು ವರ್ಷದ ಭಾಷಾ ಕೋರ್ಸ್ ತೆಗೆದುಕೊಳ್ಳಲು ಪ್ರೋತ್ಸಾಹಿಸಬೇಕು.**
- **ದೇಶದಲ್ಲಿ ಉನ್ನತ ಅಧ್ಯಯನ ಮತ್ತು ಸಂಶೋಧನೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಮಿಷನ್ ನಲಂದಾ ಮತ್ತು ಮಿಷನ್ ತಕ್ಷಶಿಲಾ ಪ್ರಾರಂಭಿಸಬೇಕು.**
- **ನಮ್ಮ ದೇಶದ ಬಗ್ಗೆ ಹೆಚ್ಚು ಹೆಚ್ಚು ಮಾಹಿತಿಗಳನ್ನು ವಿದ್ಯಾರ್ಥಿಗಳಿಗೆ ಕೊಡಬೇಕು.**
- **ಖಾಸಗಿ ಶಾಲೆಗಳು ತಮ್ಮ ಹೆಸರಿನಲ್ಲಿ "ಪಬ್ಲಿಕ್" ಎಂಬ ಪದವನ್ನು ಬಳಸಬಾರದು. ಸಾರ್ವಜನಿಕರ ವಂತಿಗೆಯಿಂದ ನಿರ್ಮಾಣವಾದ ಅಥವಾ ಸರಕಾರದ ಹಣದಿಂದ ನಡೆಯುವ ಶಾಲೆಗಳು ಮಾತ್ರ "ಪಬ್ಲಿಕ್" ಶಾಲೆಗಳಾಗುತ್ತವೆ.**
- **ಸರಕಾರಿ ಅಥವಾ ಖಾಸಗಿ, ಯಾವುದೇ ಇರಲಿ, ಶಾಲೆಗಳು ಲಾಭಕ್ಕಾಗಿ ನಡೆಯಲ್ಪಡುವ ಸಂಸ್ಥೆಗಳಾಗಿರಬಾರದು. ಅವು "ನಾನ್ ಪ್ರಾಫಿಟ್" ಸಂಸ್ಥೆಗಳಾಗಿರಬೇಕು. ಖಾಸಗಿ ಶಾಲೆಗಳು ತಮ್ಮ ಮನಸ್ಸಿಗೆ ಬಂದಂತೆ ಶುಲ್ಕ ವಿಧಿಸುವ ಅಧಿಕಾರ ಇರಬಾರದು.**

➢ ಪುಟ 5 ರಿಂದ..... **ರಾಷ್ಟ್ರೀಯ ಶಿಕ್ಷಣ ...**

ಪಾಠ ಮಾಡುವ ಶಿಕ್ಷಕರ ಜವಾಬ್ದಾರಿಯೂ ಹೆಚ್ಚೇ ಇರುತ್ತದೆ. ಹಾಗಾಗಿ ಶಿಕ್ಷಕರ ವಲಯದಲ್ಲಿರುವ ತಾರತಮ್ಯಗಳನ್ನು ಇಲ್ಲವಾಗಿಸಲು ಸರಕಾರ ಕ್ರಮ ಕೈಗೊಳ್ಳಬೇಕು ಎಂಬುದು ಸಮಿತಿಯ ಅನಿಸಿಕೆ. ಅತ್ಯುತ್ತಮ ಶಿಕ್ಷಣ ಸಾಧ್ಯವಾಗಬೇಕಾದರೆ ಆಧುನಿಕ ಕಟ್ಟಡ, ಆಧುನಿಕ ಪಠ್ಯಕ್ರಮವಿದ್ದರೆ ಮಾತ್ರ ಸಾಲದು. ಅದನ್ನು ಪ್ರಸ್ತುತ ಪಡಿಸುವವರು ಕೂಡ ಅತ್ಯುತ್ತಮರೇ ಆಗಿರಬೇಕು. ಹಾಗಾಗಿ ಇನ್ನು ಮುಂದೆ ಬಿಎ, ಬಿಎಸ್ಸಿ ಮುಗಿಸಿ 1 ವರ್ಷದ ಬಿಎಡ್ ಪದವಿ ಪಡೆಯುವ ಸಂಪ್ರದಾಯವನ್ನು ನಿಲ್ಲಿಸಿ ನಾಲ್ಕು ವರ್ಷಗಳ ಶಿಕ್ಷಣ ಪದವಿಯನ್ನೇ ಹೊಸದಾಗಿ ಪ್ರಾರಂಭಿಸಬೇಕು ಎಂಬುದು ಸಮಿತಿಯ ನಿಲುವು. ಇದಕ್ಕಾಗಿ ಹೊಸ ಶಿಕ್ಷಣ ಮಹಾವಿದ್ಯಾಲಯಗಳನ್ನು ಸ್ಥಾಪಿಸಬೇಕು; ಮಾತ್ರವಲ್ಲ ಈಗ ಇರುವ ವಿಶ್ವವಿದ್ಯಾಲಯಗಳಲ್ಲಿ ಕೂಡ ಶಿಕ್ಷಣ ಪದವಿಯನ್ನು ಪ್ರಾರಂಭಿಸಬೇಕು ಎಂದು ಸಮಿತಿ ಹೇಳಿದೆ.

ಸಮಿತಿ ಹೇಳಿರುವ ಒಂದು ಪ್ರಮುಖ ವಿಷಯ ಏನೆಂದರೆ ಲಿಬರಲ್ ಆರ್ಟ್ಸ್ ಪದವಿ. ಈಗ ನಮ್ಮಲ್ಲಿ ಬಿಎ, ಬಿಕಾಂ, ಬಿಎಸ್ಸಿ ಮುಂತಾದ, ವಿಷಯ ಕೇಂದ್ರಿತ ಪದವಿಗಳಿವೆ. ಅಂದರೆ ಬಿಎ ತರಗತಿ ಸೇರಿದವನು ಕಲೆ ಬಿಟ್ಟು ಬೇರೆ ವಿಷಯಗಳಿಗೆ ಸಂಬಂಧಿಸಿ ಓದುವಂತಿಲ್ಲ. ಮೆಕಾಲೆ ಪ್ರಣೀತ ಶಿಕ್ಷಣ ಪದ್ಧತಿಯಿಂದಾಗಿ ಶತಮಾನಗಳಿಂದ ಮುಂದುವರಿದು ಬಂದಿರುವ ಈ ಪದ್ಧತಿ ಕೊನೆಗೊಳ್ಳಬೇಕು. ಜ್ಞಾನವೆಂಬುದು ಹೀಗೆ ಸರಳರೇಖಾತ್ಮಕವಾಗಿ ಹರಿಯುವ ಸಂಗತಿ ಅಲ್ಲ. ಅರ್ಥಾತ್, ಗಣಿತವನ್ನು ಪದವಿಯಲ್ಲಿ ಆರಿಸಿಕೊಂಡಾತನಿಗೆ ಎಕನಾಮಿಕ್ಸ್ ಮತ್ತು ಮನೋವಿಜ್ಞಾನದಲ್ಲಿ ಆಸಕ್ತಿ ಇರಬಹುದು. ಇತಿಹಾಸವನ್ನು ಓದಲು ಆಯ್ಕೆ ಮಾಡಿಕೊಂಡಾತನಿಗೆ ಪ್ರಾಣಿಶಾಸ್ತ್ರದಲ್ಲೋ ಸ್ಟಾಟಿಸ್ಟಿಕ್ಸ್‌ನಲ್ಲೋ ಆಸಕ್ತಿ ಇರಬಾರದು ಎಂದೇನಿಲ್ಲವಲ್ಲ? ಹಾಗಾಗಿ ವಿದ್ಯಾರ್ಥಿಗಳಿಗೆ ತಮಗೆ ಇಷ್ಟವಾದ ಯಾವುದೇ ಕಾಂಬಿನೇಷನ್ ಆರಿಸಿಕೊಂಡು ಓದುವ ವ್ಯವಸ್ಥೆ ಬರಬೇಕು. ಈ ರೀತಿಯಲ್ಲಿ ಪದವಿ ಪಡೆಯುವವರಿಗೆ ಬ್ಯಾಚುಲರ್ ಆಫ್ ಲಿಬರಲ್ ಆರ್ಟ್ಸ್ ಎಂಬ ಪ್ರಮಾಣಪತ್ರ ಕೊಡಬಹುದು. ಸಮಿತಿ ಈ ನಿರ್ಧಾರಕ್ಕೆ ಬರಲು ಇನ್ನೊಂದು ಕಾರಣ ಸಂಶೋಧನಾ ಕ್ಷೇತ್ರ. ಇಂದು ಸಂಶೋಧನಾ ಕ್ಷೇತ್ರ ನಿಂತ ನೀರಾಗಿದೆ. ಜನರಿಲ್ಲದ ಮರುಭೂಮಿಯಾಗಿದೆ. ಸರಕಾರದ ಗ್ರ್ಯಾಂಟ್ ಸಿಗುತ್ತದೆ, ಹಾಗಾಗಿ ಸಂತೆಯಲ್ಲಿ ಮೂರು ಮೊಳ ನೇಯೋಣ ಎಂಬ ಮನಸ್ಥಿತಿಯವರೇ ಅಲ್ಲಿ ಹೆಚ್ಚು ತುಂಬಿಕೊಳ್ಳುತ್ತಿದ್ದಾರೆ. ಸಂಶೋಧನೆಯಲ್ಲಿ ಯುವಜನರು ಆಸಕ್ತಿ ಕಳೆದುಕೊಳ್ಳಲು ಮುಖ್ಯ ಕಾರಣ ಅವರ ಪದವಿ ಜ್ಞಾನ, ಸೀಮಿತ ಕ್ಷೇತ್ರಗಳಿಗೆ ಮೀಸಲಾಗಿರುವುದು. ಅಂದರೆ ವಿಜ್ಞಾನ ಓದಿದವರಿಗೆ ಕಾಮರ್ಸ್ ಜ್ಞಾನವಿಲ್ಲ, ಕಾಮರ್ಸ್ ಓದಿದವರಿಗೆ ಕಲಾವಿಷಯಗಳ ಜ್ಞಾನವಿಲ್ಲ. ಹೀಗಾಗಿ ಬರುತ್ತಿರುವ ಸಂಶೋಧನಾ ಪ್ರಬಂಧಗಳಲ್ಲಿಯೂ ಆಸಕ್ತಿ ಹುಟ್ಟಿಸುವಂಥ ಯಾವ ಸಂಗತಿಗಳೂ ಕಾಣಿಸುತ್ತಿಲ್ಲ. ಈ ಟ್ರೆಂಡ್ ಬದಲಾಗಬೇಕಾದರೆ ಅವರಿಗೆ ತಮಗಿಷ್ಟವಾದ ವಿಷಯಗಳಲ್ಲಿ ಓದಲು, ಪದವಿ ಪಡೆಯಲು ಅವಕಾಶವಿರಬೇಕು. ತಮ್ಮ ಇಷ್ಟದ ವಿಷಯಗಳಲ್ಲಿ ಪದವಿ ಪಡೆದವರು ಸಂಶೋಧನಾ ಕ್ಷೇತ್ರಕ್ಕೆ ಕಾಲಿಡುವ ಸಾಧ್ಯತೆ ಹೆಚ್ಚಿರುತ್ತದೆ.

ಸಮಿತಿಯು ತನ್ನ ಶಿಫಾರಸುಗಳಲ್ಲಿ ಚರ್ಚಿಸಿರುವ ಮತ್ತೊಂದು ಪ್ರಮುಖ ವಿಷಯ ಎಂದರೆ ಭಾಷೆ. ಭಾಷೆಯ ಕುರಿತಾಗಿ ಸಮಿತಿ ಹೇಳಿರುವ ಕೆಲವು ಮಾತುಗಳು ಗಮನಾರ್ಹ. ಮಗುವಿಗೆ 3ನೇ ವರ್ಷದಿಂದ ಭಾಷೆಯನ್ನು ಅಥವಾ ಭಾಷೆಗಳನ್ನು ಕಲಿಯುವ ಸಾಮರ್ಥ್ಯ ಸಿದ್ಧಿಸುತ್ತದೆ. ಆ ವಯಸ್ಸಿನಲ್ಲಿ ಎರಡು ಮೂರು ಭಾಷೆಗಳನ್ನು ಕೂಡ ಅವರು ಸುಲಭವಾಗಿ ಕಲಿತುಬಿಡಬಲ್ಲರು. ಹಾಗಾಗಿ ಮಕ್ಕಳಿಗೆ ಎಳವೆಯಲ್ಲೇ ಭಾಷೆಗಳನ್ನು ಕಲಿಸುವ ಪ್ರಕ್ರಿಯೆ ಪ್ರಾರಂಭವಾಗಬೇಕು. ಭಾಷೆಯ ಕಲಿಕೆ ಎಂದರೆ ಲಿಪಿಯ ಕಲಿಕೆ ಅಲ್ಲ. ಲಿಪಿ ಭಾಷೆಯನ್ನು ಕಲಿಯಲು ಇರುವ ಒಂದು ಸಲಕರಣೆ ಮಾತ್ರ. ಕೇಳುವುದು, ಮಾತಾಡುವುದು, ಬರೆಯುವುದು, ಓದುವುದು ಇವೆಲ್ಲವೂ ಕಲಿಕೆಯ ವಿವಿಧ ಹಂತಗಳು. ಬರವಣಿಗೆಯ ಭಾರ ಇಲ್ಲದೆ ಮಕ್ಕಳಿಗೆ ಭಾಷೆಯನ್ನು ಕಲಿಸುವ ಕೆಲಸ ಮೊದಲು ಪ್ರಾರಂಭವಾಗಬೇಕು. ಮೊದಲಿಗೆ ಎರಡು ಭಾಷೆಗಳನ್ನು ಕಲಿಸಿ ನಂತರ (ಹೈಸ್ಕೂಲಿಗೆ ಹೋದಾಗ) ವಿದ್ಯಾರ್ಥಿಯ ಸಾಮರ್ಥ್ಯಕ್ಕೆ ಅನುಗುಣವಾಗಿ ಮತ್ತೊಂದು ಅಥವಾ ಎರಡು ಭಾಷೆಗಳನ್ನು ಕಲಿಸಬಹುದು. ಮಾತೃಭಾಷೆ, ಸ್ಥಳೀಯ ಅಥವಾ ರಾಜ್ಯ ಭಾಷೆ, ದೇಶದಲ್ಲಿ ಸಾರ್ವತ್ರಿಕವಾಗಿ ಬಳಕೆಯಲ್ಲಿರುವ ಭಾಷೆ, ಅಂತಾರಾಷ್ಟ್ರೀಯ ಭಾಷೆ ಮತ್ತು ಅಭಿಜಾತ ಭಾಷೆ – ಇವುಗಳಲ್ಲಿ ಎಷ್ಟು ಸಾಧ್ಯವೋ ಅಷ್ಟು ಭಾಷೆಗಳನ್ನು ಕಲಿಯಲು ವಿದ್ಯಾರ್ಥಿ ಪ್ರಯತ್ನಿಸಬೇಕು ಎನ್ನುವುದು ಸಮಿತಿಯ ಆಶಯ. ಮಗುವಿನ ಪ್ರಾಥಮಿಕ ಶಿಕ್ಷಣ ಮಾತ್ರ ಮಾತೃಭಾಷೆಯಲ್ಲೇ ಆಗಬೇಕು ಎಂಬ ವಾದವನ್ನು ಸಮಿತಿ ಎತ್ತಿಹಿಡಿದಿದೆ. ಜೊತೆಗೆ ಹೈಯರ್ ಪ್ರೈಮರಿ ಅಥವಾ ಸೆಕೆಂಡರಿ ಮಟ್ಟದಲ್ಲಿ ವಿಜ್ಞಾನವನ್ನು ಎರಡು ಭಾಷೆಗಳಲ್ಲಿ ಕಲಿಯುವ ಪ್ರಯೋಗವನ್ನೂ ಮಾಡಬಹುದು ಎಂದಿದೆ. ವಿಜ್ಞಾನವನ್ನು ಅಂತಾರಾಷ್ಟ್ರೀಯ ಭಾಷೆಯಾದ ಇಂಗ್ಲೀಷ್‌ನಲ್ಲಿ ಓದುವುದರಿಂದ ಸಾಕಷ್ಟು ಪ್ರಮಾಣದ ಪುಸ್ತಕಗಳನ್ನು ಅಧ್ಯಯನ ಮಾಡುವ ಅವಕಾಶ ಸಿಗುತ್ತದೆ. ಹಾಗೆಯೇ ಸ್ಥಳೀಯ ಭಾಷೆಯಲ್ಲೂ ವಿಜ್ಞಾನವನ್ನು ಅಧ್ಯಯನ ಮಾಡುವುದರಿಂದ ತಾನು ಕಲಿತದ್ದನ್ನು ತನ್ನ ಪರಿಸರದವರಿಗೆ ತಿಳಿಸಿಹೇಳುವ ಅಥವಾ ವಿವಿಧ ಮಾಧ್ಯಮಗಳಲ್ಲಿ ಬಳಸುವ ಸಾಮರ್ಥ್ಯ ವಿದ್ಯಾರ್ಥಿಗೆ ಬರುತ್ತದೆ. ಸಮಿತಿಯು, ವಿದ್ಯಾರ್ಥಿ ತನ್ನ ಹೈಸ್ಕೂಲ್ ಹಂತದಲ್ಲಿದ್ದಾಗ "ಭಾರತೀಯ ಭಾಷೆಗಳು" ಎಂಬ ಒಂದು ಕೋರ್ಸ್ ಕೂಡ ಸೇರಿಕೊಳ್ಳಬಹುದು; ಆ ಮೂಲಕ ಅವನಿಗೆ ಭಾರತದ ಎಲ್ಲ ಭಾಷೆಗಳು ಹೇಗೆ ಅಂತರ್‌ಸಂಬಂಧ ಹೊಂದಿವೆ, ಹೇಗೆ ಅವೆಲ್ಲಕ್ಕೂ ಅಚ್ಚರಿ ಹುಟ್ಟಿಸುವಂಥ ಸಾಮ್ಯವಿದೆ ಎಂಬುದು ಅರ್ಥವಾಗಬಹುದು; ಆ ಮೂಲಕ ದೇಶದ ಬಗ್ಗೆ ಹೆಚ್ಚಿನ ತಿಳಿವಳಿಕೆ ಸಿಗಬಹುದು ಎಂದಿದೆ.

ಶಿಕ್ಷಣದಲ್ಲಿ ಸ್ವಾತಂತ್ರ್ಯವೂ ಇರಬೇಕು, ಎಲ್ಲ ಶಿಕ್ಷಣ ಸಂಸ್ಥೆಗಳನ್ನು ನಿಯಮ ಮೀರಿ ಹೋಗದಂತೆ ನಿಯಂತ್ರಿಸಬಲ್ಲ ಒಂದು ಕೇಂದ್ರವೂ ಇರಬೇಕು. ಆಗಲೇ ಹೇಳಿದಂತೆ, ದೇಶದಲ್ಲಿ ಸ್ಥಳೀಯ ವೈವಿಧ್ಯಗಳನ್ನು ಉಳಿಸಿಕೊಂಡೇ ಎಲ್ಲ ರಾಜ್ಯಗಳು ಒಂದು ಸಾರ್ವತ್ರಿಕ ಚೌಕಟ್ಟನ್ನೂ ಹಾಕಿಕೊಳ್ಳಬೇಕಾಗುತ್ತದೆ. ಇಷ್ಟು ದಿನ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲ ಸಂಗತಿಗಳನ್ನು ನಿರ್ಧರಿಸುತ್ತಿದ್ದದ್ದು ಮಾನವ ಸಂಪದಭಿವೃದ್ಧಿ ಸಚಿವಾಲಯ (ಎಚ್‌ಆರ್‌ಡಿ). ಆದರೆ ಶಿಕ್ಷಣಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಸಚಿವಾಲಯ (ಮಿನಿಸ್ಟ್ರಿ ಆಫ್ ಎಡ್ಯುಕೇಷನ್) ಇರಬೇಕೆಂಬುದು ಶಿಕ್ಷಣ ನೀತಿ ಸಮಿತಿಯ ಅಭಿಪ್ರಾಯ. ಹಾಗೆಯೇ, ದೇಶದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ಪ್ರಮುಖ ನಿರ್ಧಾರ ತೆಗೆದುಕೊಳ್ಳಲು ಮತ್ತು ಶಿಕ್ಷಣ ಕ್ಷೇತ್ರ ಹಾದಿ ತಪ್ಪದಂತೆ ಕಾಯಲು ರಾಷ್ಟ್ರೀಯ ಶಿಕ್ಷಣ ಆಯೋಗ ರಚಿಸಬೇಕು; ಸರಕಾರಗಳು ಬದಲಾಗುತ್ತ ಹೋದಂತೆ ದೇಶದಲ್ಲಿ ಶಿಕ್ಷಣ ನೀತಿಗಳೂ ಬದಲಾಗುತ್ತಾ ಇರುವುದು ಒಳ್ಳೆಯ ಲಕ್ಷಣ ಅಲ್ಲ ಎಂದೂ ಸಮಿತಿ ಕರಡಿನಲ್ಲಿ ಹೇಳಿದೆ. ಜೊತೆಗೆ, ದೇಶದಲ್ಲಿ ಸಂಶೋಧನೆಯನ್ನು ಪ್ರೋತ್ಸಾಹಿಸಲು ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ಸ್ಥಾಪಿಸಬೇಕು. ದೇಶದಲ್ಲಿ ಯಾವ ರೀತಿಯ ಸಂಶೋಧನೆಗಳು ನಡೆಯುತ್ತಿವೆ, ಯಾವುದು ನಡೆಯಬೇಕು, ಸಂಶೋಧನೆಗಳ ಗುಣಮಟ್ಟ ಚೆನ್ನಾಗಿದೆಯೇ, ಇಳಿದಿದೆಯೇ, ಸಂಶೋಧನೆಯ ಮೌಲ್ಯ ಜಾಗತಿಕ ಮಟ್ಟದಲ್ಲಿರಬೇಕಾದರೆ ಏನು ಮಾಡಬೇಕು–ಇವೆಲ್ಲವನ್ನು ಚಿಂತಿಸುವ, ನಿರ್ಣಯಿಸುವ ಕೆಲಸ ಈ ಸಂಸ್ಥೆಯದು. ದೇಶದಲ್ಲಿ ಉನ್ನತ ಶಿಕ್ಷಣದ ಮಟ್ಟದಲ್ಲಿ ಗುಣಮಟ್ಟ ಮತ್ತು ಏಕತೆ ಕಾಪಾಡಲೆಂದು ನ್ಯಾಷನಲ್ ಹೈಯರ್ ಎಜ್ಯುಕೇಷನ್ ರೆಗ್ಯುಲೇಟರಿ ಅಥಾರಿಟಿಯನ್ನು ಸ್ಥಾಪಿಸಬೇಕು. ಹಾಗೆಯೇ ಯೂನಿವರ್ಸಿಟಿ ಗ್ರ್ಯಾಂಟ್ ಕಮೀಷನ್ ಅನ್ನು ಹೈಯರ್ ಎಜ್ಯುಕೇಷನ್ ಗ್ರ್ಯಾಂಟ್ ಕಮೀಷನ್ ಎಂದು ಮರುನಾಮಕರಣ ಮಾಡಬೇಕು.

ದೇಶದ ಪ್ರಮುಖ ಶಿಕ್ಷಣ ತಜ್ಞರು ಜೊತೆಗೂಡಿ ಚರ್ಚಿಸಿ ರಚಿಸಿರುವ ಈ ಶಿಕ್ಷಣ ನೀತಿ ಮುಂದಿನ ಹತ್ತಿಪ್ಪತ್ತು ವರ್ಷಗಳಲ್ಲಿ ದೇಶ ಯಾವ ದಿಕ್ಕಿನಲ್ಲಿ ಮುಂದುವರಿಯಬೇಕು ಎಂಬುದನ್ನೂ ಗಮನದಲ್ಲಿಟ್ಟುಕೊಂಡಿದೆ. ದೇಶದ ಪ್ರಗತಿಗೂ ಶಿಕ್ಷಣ ಕ್ಷೇತ್ರಕ್ಕೂ ಗಳಸ್ಯ ಕಂಠಸ್ಯ. ಒಂದಿಲ್ಲದೆ ಇನ್ನೊಂದಿಲ್ಲ. ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆ ಮಾಡಿಕೊಂಡ ದೇಶಗಳು ಪ್ರಗತಿಯ ದಾರಿಯಲ್ಲಿ ಮುಂದೋಡುತ್ತಿರುವ ಹತ್ತಾರು ಉದಾಹರಣೆಗಳು ನಮ್ಮ ಕಣ್ಣ ಮುಂದಿವೆ. ಹಾಗೆಯೇ ಯಾವ ರಾಷ್ಟ್ರ ಶಿಕ್ಷಣವನ್ನು ತನ್ನ ಆದ್ಯತೆಯ ಪಟ್ಟಿಯಿಂದ ತೆಗೆದಿಟ್ಟಿದೆಯೋ ಅದು ಪ್ರಗತಿಯ ವಿಷಯದಲ್ಲಿ ಕುಂಟುವುದನ್ನೂ ನಾವು ನೋಡಬಹುದು. ಭಾರತದ ದುರ್ದೈವ, ಒಂದಾನೊಂದು ಕಾಲದಲ್ಲಿ ಜ್ಞಾನಕ್ಷೇತ್ರದಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರಾಗಿದ್ದ ಈ ದೇಶ ಇನ್ನೂರು ವರ್ಷಗಳ ಕಾಲ ಮೆಕಾಲೆ ಪದ್ಧತಿಯ ಶಿಕ್ಷಣವನ್ನು ಕಂಡುಂಡು ಗುಲಾಮಗಿರಿಯ ಮನಸ್ಥಿತಿಯಲ್ಲಿ ದಿನದೂಡಬೇಕಾಯಿತು. ಇನ್ನಾದರೂ ನಾವು ಮೆಕಾಲೆಯನ್ನು ಬದಿಗಿಟ್ಟು ನಮ್ಮದೇ ಆದ ಶಿಕ್ಷಣವನ್ನು ರೂಪಿಸಿಕೊಳ್ಳಬೇಕಾಗಿದೆ. ದೇಶದ ಬಗ್ಗೆ ಪ್ರೀತಿ ಇಲ್ಲದ, ದೇಶವನ್ನು ತುಕ್ಡೇ ತುಕ್ಡೇ ಮಾಡುತ್ತೇವೆನ್ನುವ ಮನಸ್ಥಿತಿಯನ್ನು ಸೃಷ್ಟಿಸುವ ಶಿಕ್ಷಣವನ್ನು ಕಿತ್ತೊಗೆದು ದೇಶಕ್ಕಾಗಿ ದುಡಿಯುವ ಕೈಗಳನ್ನು, ದೇಶವನ್ನು ಪ್ರೀತಿಸುವ ಹೃದಯಗಳನ್ನು, ದೇಶದ ಪ್ರಗತಿಗಾಗಿ ಚಿಂತಿಸುವ ಮಿದುಳುಗಳನ್ನು ನಾವು ರೂಪಿಸಬೇಕಾಗಿದೆ. ಅಂಥ ದೂರದೃಷ್ಟಿಯನ್ನಿಟ್ಟುಕೊಂಡು ಹೊರಟಿರುವ ಯಾತ್ರೆಯಲ್ಲಿ ಇಟ್ಟ ಮೊದಲ ಹೆಜ್ಜೆಯೇ ರಾಷ್ಟ್ರೀಯ ಶಿಕ್ಷಣ ನೀತಿ. ಮುಂದೆ ಬರಲಿರುವ ತಲೆಮಾರುಗಳು, ಶಿಕ್ಷಣವನ್ನು ಸಹ್ಯವಾಗಿಸಿದ್ದಕ್ಕಾಗಿ ಈ ನೀತಿಗೆ ಕೃತಜ್ಞರಾಗಿರಬೇಕು!

**ಕೃಪೆ : ವಿಕ್ರಮ**

**ಮನಸಿನ ಮನ ತಿಳಿಯುವ ಮನ ಬ್ಯಾರೆಲೊ. – ಸಂತ ಶಿಶುನಾಳ ಷರೀಫ**

# ಶಿಕ್ಷಣ ನೀತಿ

ಶೀತಲ ವಿ. ಕುರಡೇಕರ
ರಾಣೇಬೆನ್ನೂರ

ಶಿಕ್ಷಣ ಅನ್ನೋದು ಮಕ್ಕಳಿಗೆ ಹೊರೆ ಆಗಬಾರದು ಅದನ್ನು ಆನಂದಿಸುತ್ತ ಪ್ರೀತಿಯಿಂದ ಕಲಿಯಬೇಕು. ಈಗಿನ ಶಿಕ್ಷಣ ಮಕ್ಕಳಿಗೆ ಬಂದು ರೀತಿಯ ಶಿಕ್ಷೆ ಆಗಿದೆ, ಕೆ.ಜಿ ಗಟ್ಟಲೇ ಪುಸ್ತಕಗಳು, ಸರಿಯಾಗಿ ಪೂರ್ಣಗೊಳ್ಳದ ಪಠ್ಯಕ್ರಮ, ಶಾಲೆಯಲ್ಲಿ ಅಭ್ಯಾಸ ಮಾಡುವುದಿಲ್ಲವೆಂದು ಟ್ಯೂಷನಗೆ ಕಳಿಸುವುದು, ನಗರದ ಗಲ್ಲಿಗಲ್ಲಿಗಳಲ್ಲಿ ಶಾಲೆಗಳು ಇದ್ದರೂ ಸಹ ಮಕ್ಕಳ ವಿದ್ಯಾಭ್ಯಾಸಕ್ಕೆ ಲಕ್ಷಗಟ್ಟಲೆ ಡೊನೇಷನ್ ತುಂಬುವುದು, ಡೊನೇಷನ್ ತುಂಬಿದ ಶಾಲೆಗಳಲ್ಲಿ ಅಧ್ಯಾಪಕರು ಸರಿಯಾಗಿ ಪಾಠ ಮಾಡುತ್ತಾರೆ ಹಾಗೂ ಎಲ್ಲ ಮೂಲಭೂತ ಸೌಕರ್ಯಗಳು ಸಿಗುತ್ತವೆ ಎಂಬ ವಿಶ್ವಾಸ. ಈ ಶಿಕ್ಷೆಯಾಗಿರುವ ಶಿಕ್ಷಣ ನಮಗೆ ಬೇಡ.

ನಾವೆಲ್ಲ ಶಾಲೆ ಕಲಿಯುವಾಗ "ನಲಿ–ಕಲಿ" ಅಂತ ಗಾದೆಮಾತುಗಳನ್ನು ಕಲಿತಿದ್ದೇವೆ. ಅದೇ ರೀತಿ ಸಹ ಶಿಕ್ಷಕರು ನಮಗೆ ಪಾಠ ಮಾಡುತ್ತಿದ್ದರು, ಪಾಠವನ್ನು ಒಂದು ಕತೆಯ ರೂಪದಲ್ಲಿ ಹೇಳಿ ಕೊಡುತ್ತಿದ್ದರು, ಮನೆಯಲ್ಲಿ ಕುಳಿತು ಅಭ್ಯಾಸ ಮಾಡುವುದಕ್ಕಿಂತ ಶಾಲೆಯಲ್ಲಿಯೇ ಪ್ರಾಯೋಗಿಕ ಹಾಗೂ ಪಠ್ಯದ ರೀತಿಯಲ್ಲಿ ಅಭ್ಯಾಸವಾಗುತ್ತಿತ್ತು. ಆಗಿನ ಕಾಲದಲ್ಲಿ ಮಕ್ಕಳು ಶೇಕಡಾವಾರು ಅಂಕಗಳನ್ನು ಗಳಿಸುವುದಕ್ಕಿಂತ ಎಷ್ಟರ ಮಟ್ಟಿಗೆ ವಿದ್ಯೆ, ಜಾಣ್ಮೆ, ಸಾಮಾನ್ಯ ಜ್ಞಾನ ಪಡೆದಿದ್ದಾರೆ ಎಂಬುವುದು ಮುಖ್ಯವಾಗಿತ್ತು. ಆದರೆ ಈಗಿನ ಮಕ್ಕಳ ವಿದ್ಯಾಭ್ಯಾಸ ಶೇಕಡಾ 99%ರಷ್ಟು ಪಡೆದಿದ್ದರು ನಮ್ಮ ರಾಜ್ಯದ ಮುಖ್ಯಮಂತ್ರಿ ಯಾರು? ನಮ್ಮ ಊರು ಯಾವ ರಾಜ್ಯದಲ್ಲಿದೆ ಅಂತ ಸಹ ಗೊತ್ತಿರುವುದಿಲ್ಲ.


ದೊಡ್ಡ–ದೊಡ್ಡ ನಗರಗಳಲ್ಲಿ ಶಾಲೆಗಳಿಗೆ ಪ್ರವೇಶಾತಿ ದೊರೆಯುವುದು ತೊಂದರೆಯಾಗಿದೆ ಕಾರಣ: ಬಡತನ, ಗುಣ ಮಟ್ಟದ ವಿದ್ಯಾಭ್ಯಾಸ, ಡೊನೇಷನ್... ಆದ ಕಾರಣ ಕೆಲವು ದೊಡ್ಡ–ದೊಡ್ಡ ನಗರಗಳಲ್ಲಿ ಪಾಲಕರು ಮಕ್ಕಳಿಗೆ ಶಾಲೆಗೆ ಕಳುಹಿಸುವ ಬದಲು ಮನೆಯೇ ಮೊದಲ ಪಾಠ ಶಾಲೆ ಎಂಬುವಂತೆ ಸರಕಾರದಿಂದ ಮಾನ್ಯತೆ ಪಡೆದು ಮಕ್ಕಳಿಗೆ ಮನೆಯಲ್ಲಿ ವಿದ್ಯಾಭ್ಯಾಸ ಮಾಡಿಸುವುದರ ಜೊತೆಗೆ ಒಳ್ಳೆ ಸಂಸ್ಕಾರ ಸಹ ಕೊಡಬಹುದು ಮತ್ತು ಅದರಂತೆ ಮಕ್ಕಳು ಫಲಿತಾಂಶ ಗಳಿಸುವುದರಲ್ಲಿ ಒಂದು ಹೆಜ್ಜೆ ಮುಂದೆ ಇದ್ದಾರೆ.

ಈಗಿನ ಮಕ್ಕಳಿಗೆ ಶಿಕ್ಷಣ ನೀತಿಯಲ್ಲಿ ಪುಸ್ತಕದ ಜ್ಞಾನದೊಂದಿಗೆ ಸಾಮಾಜಿಕ ಜ್ಞಾನದ ಅವಶ್ಯಕತೆ ತುಂಬಾನೇ ಇದೆ. ಸರಕಾರಿ ಶಾಲೆಗಳಂತು ನಗರಗಳಲ್ಲಿ ಮುಚ್ಚಿ ಹೋಗುತ್ತಿವೆ. ಆದರೆ ಹಾಗೆ ನೋಡಬೇಕೆಂದರೆ ಹಳ್ಳಿಗಳಲ್ಲಿ ಕೆಲವು ಶಾಲೆಗಳು ಉಳಿದಿವೆ. ಅಂತಹ ಶಾಲೆಗಳ ವ್ಯವಸ್ಥೆ ಸರಿ ಇಲ್ಲದಿದ್ದರೂ ಸಹ ಶಾಲೆ ಆವರಣದಲ್ಲಿ ಹೂ ತೋಟ, ಗಿಡ, ಗೋಡೆಗಳ ಮೇಲೆ ಒಳ್ಳೆ–ಒಳ್ಳೆ ಗಾದೆಮಾತುಗಳು, ಜ್ಞಾನಪೀಠ ಪುರಸ್ಕೃತರ ಹೆಸರುಗಳು, ಮಗ್ಗಿಗಳು, ಪಂಚಾಂಗ ಈ ರೀತಿಯ ಕಣ್ಣಿಗೆ ಆಕರ್ಷಿತವಾಗಿ, ಮೆದುಳಿನಲ್ಲಿ ಬುದ್ಧಿ ಉಳಿಯುವ ದೃಶ್ಯಗಳು ಕಂಡುಬರುತ್ತವೆ. ವಿದ್ಯಾರ್ಥಿಗಳಿಗೆ ಕಸೂತಿ ಕಲಿಕೆ, ಕಸದಲ್ಲಿ ರಸ, ಚಿತ್ರ ಬಿಡಿಸುವುದು ಈ ರೀತಿ ಹಲವಾರು ಕಲೆಗಳನ್ನು ಕಲಿತಿರುವುದು ನಮಗೆ ಕಂಡು ಬರುತ್ತದೆ. ನಿಜವಾಗಿ ಹೇಳಬೇಕೆಂದರೆ ಗುರುಕುಲ ವ್ಯವಸ್ಥೆ ನಮಗೆ ಕಂಡು ಬರುತ್ತದೆ.

ನಿಜ ಹೇಳಬೇಕೆಂದರೆ ಪದವಿ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಿಸುತ್ತಿರುವ ಪ್ರತಿಯೊಬ್ಬ ಪ್ರಾಧ್ಯಾಪಕರುಗಳಿಗೆ ಕನಿಷ್ಠ 3 ವರ್ಷಗಳಾದರೂ ಪ್ರಾಥಮಿಕ ಶಿಕ್ಷಣವನ್ನು ಮಕ್ಕಳಿಗೆ ನೀಡಿ ನಂತರ ಪದವಿ ಶಿಕ್ಷಣವನ್ನು ನೀಡುವಂತೆ ಮಾಡಬೇಕು. ಹಾಗೂ ಸರಕಾರಿ ಶಾಲೆಗಳ ವಿಷಯಕ್ಕೆ ಬಂದರೆ ನಗರಗಳಲ್ಲಿ ಅತಿ ಹೆಚ್ಚು ಡೊನೇಷನ್ ಪಡೆಯುತ್ತಿರುವ ಪ್ರತಿಯೊಂದು ಶಾಲಾ–ಕಾಲೇಜಿನವರು ಕಡ್ಡಾಯವಾಗಿ ಸರಕಾರಿ ಶಾಲೆಗಳನ್ನು ದತ್ತು ಪಡೆದು ಇಂತಿಷ್ಟು ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಕಲ್ಪಿಸಿಕೊಡುವಂತೆ ಮಾಡಬೇಕು.

ಸೆಮಿಸ್ಟರ್ ನೀತಿಯನ್ನು ಆದಷ್ಟು ನಿರ್ಲಕ್ಷಿಸಿದರೆ ಉತ್ತಮ ಯಾಕೆಂದರೆ ಮೊದಲನೇ ಸೆಮಿಸ್ಟರ್‌ನಲ್ಲಿ ಕಲಿತು ಎರಡನೇ ಸೆಮಿಸ್ಟರ್‌ಗೆ ಹೋದರೆ ಮೊದಲನೇ ಸೆಮಿಸ್ಟರ್‌ನ ಜ್ಞಾನವನ್ನು ಮರೆತು ಬಿಟ್ಟಿರುತ್ತಾರೆ. ಮಕ್ಕಳ ಪಠ್ಯಕ್ರಮದಲ್ಲಿ ಕಡ್ಡಾಯವಾಗಿ ನಮ್ಮ ಸಂಸ್ಕೃತಿ ಹಾಗೂ ದೇಶಾಭಿಮಾನ ಮೂಡಿಸುವಂತಹ ಐತಿಹಾಸಿಕ ಕತೆಗಳನ್ನು ಅಳವಡಿಸಬೇಕು. ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ ಸಿಲೆಬಸ್ ಕಡಿಮೆ ಮಾಡಿ ಆದಷ್ಟು ಸಾಮಾನ್ಯ ಜ್ಞಾನದತ್ತ ಗಮನ ಹರಿಸುವಂತೆ ಮಾಡಬೇಕು. ಅದರೊಂದಿಗೆ ಮಕ್ಕಳಿಗೆ ಕೃಷಿ, ಸಂಸ್ಕಾರ, ಬಡತನದ ಬಗ್ಗೆ ಅರಿವು ಮೂಡಿಸಿದರೆ ಒಳ್ಳೆಯದು ಎಂಬ ಅಭಿಪ್ರಾಯ ನನ್ನದು. ●

## ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಹೊಂದಲು ಯೋಜಿಸುತ್ತಿರುವ ಭಾರತ



ಭಾರತ ತನ್ನದೇ ಆದ ಸ್ವಂತ ಬಾಹ್ಯಾಕಾಶ ನಿಲ್ದಾಣ (ಸ್ಪೇಸ್ ಸ್ಟೇಶನ್)ವನ್ನು ಆರಂಭಿಸಲು ಯೋಜನೆ ರೂಪಿಸುತ್ತಿದೆ ಎಂಬ ವಿಷಯವನ್ನು ಇಸ್ರೋ ಮುಖ್ಯಸ್ಥ ಕೆ.ಸಿವನ್ ಬಹಿರಂಗಪಡಿಸಿದ್ದಾರೆ.

ಈ ಮಹತ್ವಾಕಾಂಕ್ಷೆಯ ಯೋಜನೆ ಗಗನಯಾನ ಮಿಶನಿನ ವಿಸ್ತರಿಸಿದ ಯೋಜನೆಯಾಗಲಿದೆ ಎಂದು ಅವರು ತಿಳಿಸಿದ್ದಾರೆ.

"ಮಾನವ ಬಾಹ್ಯಾಕಾಶ ಯೋಜನೆಯನ್ನು ಆರಂಭಿಸಿದ ಬಳಿಕ ನಾವು ಗಗನಯಾನ ಕಾರ್ಯಕ್ರಮವನ್ನು ಉಳಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ, ಭಾರತವು ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಹೊಂದಲು ಯೋಜಿಸುತ್ತಿದೆ" ಎಂದು ಸಿವನ್ ಹೇಳಿದ್ದಾರೆ.

ಗಗನಯಾನ ಭಾರತದ ಮೊತ್ತ ಮೊದಲ ಮಾನವ ಸಹಿತ ಬಾಹ್ಯಾಕಾಶ ಮಿಶನ್ ಆಗಿದ್ದು, 2022ರ ವೇಳೆಗೆ ಕಾರ್ಯರೂಪಕ್ಕೆ ಬರುವ ನಿರೀಕ್ಷೆ ಇದೆ. ಗಗನಯಾನ ಯಶಸ್ವಿಯಾದ ಬಳಿಕ ಬಾಹ್ಯಾಕಾಶ ನಿಲ್ದಾಣದತ್ತ ಭಾರತ ಗಮನವನ್ನು ಹರಿಸಲಿದೆ ಎಂದು ಹೇಳಲಾಗಿದೆ.

ಭೂರಮೆ

# ಪಂಚಶೀಲಗಳ ನಾರೀಶಕ್ತಿ ಅಹಲ್ಯಾಬಾಯಿ ಹೋಳ್ಕರ್

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

ನಾರೀಶಕ್ತಿಯ ಹಿರಿಮೆಯನ್ನು ನಿರೂಪಿಸಿರುವ ಹಲವಾರು ಮಹಿಳೆಯರು ನಮ್ಮ ಇತಿಹಾಸದ ಪುಟಗಳಲ್ಲಿ ದಾಖಲಾಗಿದ್ದಾರೆ. ರಾಜ್ಯ, ಭಾಷೆ, ಜನಾಂಗ, ವರ್ಗ ಮುಂತಾದ ಯಾವ ಭೇದವಿಲ್ಲದೆ ಇಂತಹ ಧೀಮಂತ ಮಹಿಳೆಯರು ಇಂದಿಗೂ, ಎಂದಿಗೂ ಯುವಜನಾಂಗಕ್ಕೆ ಆದರ್ಶಪ್ರಾಯರೇ. ಆತ್ಮವಿಶ್ವಾಸ, ಕರ್ತವ್ಯನಿಷ್ಠೆ, ಪ್ರಾಮಾಣಿಕತೆ, ಮಾನವೀಯತೆ ಮತ್ತು ರಾಷ್ಟ್ರಪ್ರೇಮ– ಈ ಐದು ಪಂಚಶೀಲಗಳನ್ನು ತಮ್ಮಲ್ಲಿ ಅಳವಡಿಸಿಕೊಂಡು ತಮ್ಮ ಬದುಕಿನ ಸಾರ್ಥಕತೆಯನ್ನು ಕಂಡುಕೊಂಡವರು ಇವರೆಲ್ಲ. ಅದರಿಂದಲೇ ಈ ಗೌರವದ ಸ್ಥಾನ ಇವರಿಗೆ ಲಭಿಸಿರುವುದು. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ ಎಂದು ಎಲ್ಲ ಕ್ಷೇತ್ರಗಳಲ್ಲಿ ಇಂತಹ ಸಾಧಕರಿದ್ದಾರೆ. 'ಗೃಹಲಕ್ಷ್ಮಿ' ಎಂದು ಒಬ್ಬ ಸ್ತ್ರೀ ಕುಟುಂಬದ ಭದ್ರ ಆಧಾರಸ್ತಂಭವಾಗಿ ನಿಂತು ಅದರ ಎಲ್ಲ ಪ್ರಗತಿಗೆ ಹೇಗೆ ಕಾರಣಕರ್ತಳಾಗುತ್ತಾಳೆಯೋ ಅದೇ ರೀತಿಯಲ್ಲಿ ಒಂದು ನಾಡುಕಟ್ಟುವ, ಬೆಳೆಸುವ ಸಾಮರ್ಥ್ಯವೂ ಆಕೆಯಲ್ಲಿದ್ದು ಅದನ್ನು ಆಕೆ ಯಶಸ್ವಿಯಾಗಿ ನಿರ್ವಹಿಸಿರುವುದಕ್ಕೆ ಕೂಡ ಹಲವಾರು ನಿದರ್ಶನಗಳಿವೆ. ಬದುಕಿನಲ್ಲಿ ಒಂದು ಗುರಿ, ಆ ಗುರಿ ಸಾಧಿಸುವಲ್ಲಿ ಛಲ, ಅದಕ್ಕಾಗಿ ಪ್ರಾಮಾಣಿಕ ಪರಿಶ್ರಮ ಮತ್ತು ಅವೆಲ್ಲಕ್ಕೆ ಪೂರ್ವಭಾವಿಯಾಗಿ ಸಾಮಾಜಿಕ ಕಳಕಳಿ ಪ್ರತಿಯೊಬ್ಬರಲ್ಲಿ ಇರಬೇಕಾದ ಗುಣಗಳು. ಇಂತಹ ಒಂದು ಆದರ್ಶವ್ಯಕ್ತಿತ್ವವೇ 'ಅಹಲ್ಯಾಬಾಯಿ ಹೋಳ್ಕರ್' ಎಂಬ ಸ್ತ್ರೀರತ್ನ. ಇತಿಹಾಸದ ಅಧ್ಯಯನ ಎಷ್ಟು ಉಪಯುಕ್ತವೆನ್ನುವುದು ಇಂತಹವರ ಬದುಕಿನ ಬಗೆಗೆ ತಿಳಿದಾಗಲೇ ಅರಿವಿಗೆ ಬರುವುದು.

ಶಿಕ್ಷಣ ಕ್ಷೇತ್ರಕ್ಕೆ ಸಂಪೂರ್ಣ ಕಾಯಕಲ್ಪದ ಚಿಕಿತ್ಸೆಯಾಗಬೇಕು, ಅದರ ನೀತಿಯಲ್ಲಿ ಸಮಗ್ರ ಬದಲಾವಣೆಯಾಗಬೇಕು, ಆ ನಿಟ್ಟಿನಲ್ಲಿ ಭಾರತೀಯ ಶಿಕ್ಷಣದ ಪುನರುತ್ಥಾನವಾಗಬೇಕು, ಅಲ್ಲಿರುವ ಮೌಲ್ಯಾಧಾರಿತ ಶಿಕ್ಷಣವನ್ನು ವಿದ್ಯಾರ್ಥಿಗಳು ಪಡೆಯುವ ಅವಕಾಶವನ್ನು ಕಲ್ಪಿಸಬೇಕು ಎಂಬ ಘೋಷಣೆಗಳು ಈಗ ಎಲ್ಲ ಕಡೆ ಕೇಳಿಬರುತ್ತಿವೆ. ಅಂತಹ ಜ್ಞಾನಾರ್ಜನೆಯ ಒಂದು ಭಾಗವಾಗುತ್ತದೆ ನಮ್ಮ ಇತಿಹಾಸದ ಅಧ್ಯಯನ. ಏಕೆಂದರೆ ನಮ್ಮ ದೇಶದ ಇತಿಹಾಸದಲ್ಲಿ ಕಂಡುಬರುವಷ್ಟು ಸಂಖ್ಯೆಯಲ್ಲಿ ಆದರ್ಶ ವ್ಯಕ್ತಿಗಳು, ಪರಾಕ್ರಮಿಗಳು, ಸಾಹಿತ್ಯಿಕ, ಸಾಂಸ್ಕೃತಿಕ ಸಂಪನ್ಮೂಲ ಸ್ಥಳಗಳು, ವ್ಯಕ್ತಿಗಳು ಇತರ ಯಾವುದೇ ದೇಶದ ಚರಿತ್ರೆಯಲ್ಲಿ ದೊರಕಲಾರದೆಂಬುದು ಹೆಮ್ಮೆಯ ಅಂಶವೇ ಆಗಿದೆ. ಆದುದರಿಂದ ಅವೆಲ್ಲದರ ಪರಿಚಯವನ್ನು ಮಾಡಿಕೊಳ್ಳುವುದರಿಂದ ಆಗುವ ಪರಿಣಾಮ ಯಾವುದೇ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡುವುದರಿಂದ ದೊರಕುವ ಮೌಲ್ಯ ಶಿಕ್ಷಣಕ್ಕಿಂತ ಕಡಿಮೆಯದಲ್ಲ. ಅದು ಶಿಕ್ಷಣದ ಒಂದು ಅವಿಭಾಜ್ಯ ಅಂಗವೇ ಆಗಿರುತ್ತದೆಂಬುದನ್ನು ಮರೆಯಬಾರದು.

ನಮ್ಮ ಚರಿತ್ರೆಯ ಪುಟಗಳಲ್ಲಿ ದಾಖಲಾಗಿರುವ ಮಹಾರಾಣಿ ಅಹಲ್ಯಾಬಾಯಿ ಹೋಳ್ಕರ್ ಕೂಡ ತನ್ನ ಬದುಕಿನ ಮೂಲಕ ಸಮಾಜದ ಭವಿಷ್ಯದ ಜನಾಂಗಕ್ಕೆ ಪ್ರೇರಕಶಕ್ತಿಯಾಗಿರುವವಳು. 'ಆಧುನಿಕ ಭಾರತದ ಅತ್ಯಂತ ಶ್ರೇಷ್ಠಮಹಿಳೆ' ಎಂಬ ಗೌರವವನ್ನು ಪಡೆದವಳು. ಒಂದು ಸಣ್ಣ ಹಳ್ಳಿಯ ಪಾಟೀಲರ ಮಗಳಾಗಿ ಜನಿಸಿ ರಾಜಮನೆತನಕ್ಕೆ ಸೊಸೆಯಾಗಿ ಪ್ರವೇಶಿಸಿ ಸಿಂಹಾಸನದ ಜವಾಬ್ದಾರಿಯನ್ನು ವಹಿಸಿಕೊಂಡು ಸಮರ್ಥವಾಗಿ ನಿರ್ವಹಿಸಿದ ರೀತಿ ಅನನ್ಯವಾಗಿತ್ತು. ಮೂರು ದಶಕಗಳು ಆಕೆಯ ಆಳ್ವಿಕೆ ಮಾಳ್ವದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಯ್ದುಕೊಂಡಿದ್ದು ಯಾವುದೇ ಶತ್ರುವಿನ ಆಕ್ರಮಣಕ್ಕೆ ಆಸ್ಪದ ನೀಡಿರಲಿಲ್ಲ. ಮೊದಲ ದರ್ಜೆಯ ರಾಜಕಾರಣಿಯಾಗಿ ಆಡಳಿತ ನಡೆಸುತ್ತಿದ್ದ ಆಕೆಯಷ್ಟು ಯಶಸ್ವಿಯಾಗಿ ಮತ್ತು ಅತ್ಯುತ್ತಮವಾಗಿ ಆಡಳಿತ ನಿರ್ವಹಣೆಯನ್ನು ಮತ್ತಾವ ಮಹಿಳೆಯೂ ಮಾಡಿಲ್ಲವೆಂದು ಇತಿಹಾಸಕಾರರು ಹಾಗೂ ಹಲವಾರು ದೃಷ್ಟಾಂತಗಳು ನಿರೂಪಿಸುತ್ತವೆ. ಅಲ್ಲಿನ ಪ್ರತಿಯೊಬ್ಬ ಪ್ರಜೆ ವಯಸ್ಸಿನ ಭೇದವಿಲ್ಲದೆ ಆಕೆಯನ್ನು ಮನಸಾರೆ ಗೌರವಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಮಾಳ್ವದ ಪ್ರತಿಯೊಬ್ಬರೂ ಆಕೆಯನ್ನು ಒಂದು ದೈವೀಶಕ್ತಿಯ ಅವತಾರವೆಂದೇ ಪರಿಗಣಿಸುತ್ತಿದ್ದರು. ಕೇವಲ ಲೌಕಿಕವಾದ ವ್ಯವಹಾರಗಳನ್ನು ಮಾತ್ರವೇ ಆಕೆ ನಿರ್ವಹಿಸದೆ ಆಧ್ಯಾತ್ಮಿಕವಾಗಿ ಕೂಡ ಆಕೆಯ ಚಿಂತನೆಗಳು ಶ್ರೇಷ್ಠಮಟ್ಟದಲ್ಲಿರುತ್ತಿದ್ದುವು. ಹಾಗಾಗಿಯೇ ಆಕೆಯನ್ನು "ತತ್ತ್ವಜ್ಞಾನಿರಾಣಿ" ಎಂದೂ ಕರೆಯಲಾಗುತ್ತಿತ್ತು.

ಇಷ್ಟೆಲ್ಲ ಗೌರವಕ್ಕೆ ಭಾಜನಳಾದ ರಾಜಮಾತಾ ಅಹಲ್ಯಾಬಾಯಿ ಹೋಳ್ಕರ್ ತನ್ನ ಆಡಳಿತವನ್ನು ನಡೆಸಿದ ರೀತಿಯನ್ನು ತಿಳಿಯಬೇಕೆನಿಸುವ ಕುತೂಹಲ ಮೂಡುವುದು ಸಹಜವೇ. ಮೊದಲಿಗೆ ಬಾಲ್ಯದಲ್ಲಿ ಆಕೆಯ ತಂದೆ ಕೊಡಿಸಿದ್ದ ಶಿಕ್ಷಣ, ವ್ಯಕ್ತಿತ್ವಕ್ಕೆ ಉತ್ತಮ ಬುನಾದಿಯನ್ನು ಹಾಕಿತ್ತು. ನಂತರ ಆಕಸ್ಮಿಕವಾಗಿ ಮಲ್ಹಾರರಾವ್ ಹೋಳ್ಕರ್ ( ಪೇಷ್ವೆ ಬಾಜೀರಾವ್ ಬಳಿಯಲ್ಲಿ ಸೇನಾಧಿಪತಿಯಾಗಿದ್ದವರು) ಕಣ್ಣಿಗೆ ಬಿದ್ದ ಬಾಲಕಿ ಅಹಲ್ಯಾಬಾಯಿಯ ಸರಳ ಗಂಭೀರ ವ್ಯಕ್ತಿತ್ವ ಗಮನ ಸೆಳೆದಿತ್ತು. ಎಂಟು ವರ್ಷದ ಬಾಲಕಿಯಲ್ಲಿ ಸುಪ್ತವಾದ ಪ್ರತಿಭೆಯೊಂದು ಇರುವುದನ್ನು ಮಲ್ಹಾರರಾವ್ ಗುರುತಿಸಿ ತನ್ನ ಪುತ್ರ ಖಂಡೇರಾವ್ ಹೋಳ್ಕರ್ ಜೊತೆಯಲ್ಲಿ ವಿವಾಹ ಮಾಡಿಸಿದ್ದು ಆಕೆಯ ಬದುಕಿನ ತಿರುವಿಗೆ ಪ್ರಮುಖ ಘಟ್ಟವಾಗಿತ್ತು. ಮುಂದೆ ಯುದ್ಧವೊಂದರಲ್ಲಿ ಖಂಡೇರಾಯನು ವೀರಮರಣವನ್ನು ಹೊಂದಿದಾಗ ಮಲ್ಹಾರರಾವ್ ಸೊಸೆಗೆ ಯುದ್ಧವಿದ್ಯೆಯೊಂದಿಗೆ ಆಡಳಿತ ಕುರಿತು ಸಹ ತರಬೇತಿ ಕೊಡಿಸಿ ಮಾರ್ಗದರ್ಶನ ನೀಡಿದ್ದರು. ಅಹಲ್ಯಬಾಯಿ ಸಿಂಹಾಸನವನ್ನೇರುವ ಎಲ್ಲ ಸಾಮರ್ಥ್ಯವನ್ನೂ ಪಡೆದುಕೊಂಡಳು. ನಂತರ ಮಾವನೂ ತೀರಿಕೊಂಡಾಗ ಪೇಷ್ವೆಯವರ ಅನುಮತಿಯೊಂದಿಗೆ ಮಾಳ್ವದ ಆಧಿಪತ್ಯವನ್ನು ವಹಿಸಿಕೊಂಡಳು. 1766ರಲ್ಲಿ ಆಡಳಿತ ಚುಕ್ಕಾಣಿಯನ್ನು ಹಿಡಿದ ಅಹಲ್ಯಾಬಾಯಿ ಮಾವ ತನ್ನಲ್ಲಿ ಗುರುತಿಸಿದ್ದ ವಿಶಿಷ್ಟ ಪ್ರತಿಭೆಯು ಸತ್ಯವಾದುದೆಂದು ನಿರೂಪಿಸತೊಡಗಿದ್ದಳು. ಯಾವ ಶತ್ರುವೂ ಮಾಳ್ವದತ್ತ ದೃಷ್ಟಿ ಹಾಯಿಸದಂತೆ ಕ್ರಮ ಕೈಗೊಂಡಿದ್ದಳು.

ಅಹಲ್ಯಾಬಾಯಿ ಯುದ್ಧವಿದ್ಯೆಯಲ್ಲಿ ಪರಿಣಿತಳಾಗಿದ್ದುದರ ಜೊತೆಗೆ ನಾಡಿನ ಸಮಗ್ರ ಅಭಿವೃದ್ಧಿಯನ್ನು ಯಾವರೀತಿಯಲ್ಲಿ ಮಾಡಬೇಕೆಂಬುದನ್ನು ಕೂಡ ತಿಳಿದಿದ್ದಳು. ಪ್ರತಿದಿನ ಆಕೆಯ ಆಸ್ಥಾನದಲ್ಲಿ ಸಾರ್ವಜನಿಕರ ಉಪಸ್ಥಿತಿಗೆ ಅವಕಾಶವಿರುತ್ತಿತ್ತು. ರಾಜಧಾನಿಯನ್ನು ನರ್ಮದಾ ನದಿಯ ಸಮೀಪಕ್ಕೆ ಇಂದೂರ್‌ನ ದಕ್ಷಿಣ ಭಾಗದಲ್ಲಿರುವ ಮಾಹೇಶ್ವರವನ್ನಾಗಿ ಮಾಡಿಕೊಂಡಳು. ಅಲ್ಲಿನ ಸಂಪೂರ್ಣ ಪರಿಸರವನ್ನು ಬಾಹ್ಯ ಮತ್ತು ಆಂತರಿಕ ದೃಷ್ಟಿಕೋನಗಳಿಂದ ಸುಧಾರಿಸುತ್ತ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಳು. ನಗರದ ಮೂಲಭೂತ ಸೌಕರ್ಯಗಳಾದ ರಸ್ತೆಗಳು, ಧರ್ಮಶಾಲೆಗಳು, ಬಾವಿಗಳು ವಿಶ್ರಾಂತಿಗೃಹಗಳು ಸುಸಜ್ಜಿತಗೊಂಡವು. ಸಮಾಜದಲ್ಲಿ, ಜನರಲ್ಲಿ ಧಾರ್ಮಿಕ ಮನೋವೃತ್ತಿಯನ್ನು ಬೆಳೆಸಲು ಅನೇಕ ಮಂದಿರಗಳ ನಿರ್ಮಾಣವಾಯಿತು. ಹಳೆಯ ಮಂದಿರಗಳು ಜೀರ್ಣೋದ್ಧಾರಗೊಂಡವು. ದೈವಭಕ್ತಳೂ, ರಾಷ್ಟ್ರಹಿತಚಿಂತಕಳೂ ಆಗಿದ್ದ ರಾಣಿ ದೇಶದಾದ್ಯಂತ ಹಲವಾರು ಮಂದಿರಗಳನ್ನು ನಿರ್ಮಿಸಿದಳು, ಕೆಲವು ಮಂದಿರಗಳ ಜೀರ್ಣೋದ್ಧಾರ

ಪುಟ 9 ಕ್ಕೆ ➤

➢ ಪುಟ 8 ರಿಂದ..... ಅಹಲ್ಯಾಬಾಯಿ ಹೋಳ್ಕರ್ ...

ಕಾರ್ಯದತ್ತಲೂ ದೇಶದ ಅನೇಕ ರಾಜ್ಯಗಳಲ್ಲಿ ಗಮನ ಹರಿಸಿ ಕಾರ್ಯಗತಗೊಳಿಸಿದಳು. ಈ ಎಲ್ಲಾ ಕಾರ್ಯಗಳಿಗೆಂದೇ ಒಂದು ಪ್ರತ್ಯೇಕ ನಿಧಿಯನ್ನು ವ್ಯವಸ್ಥೆ ಮಾಡಿದ್ದಳು. ಉತ್ಸವಾದಿಗಳ ಆಚರಣೆಗೆ ಕೂಡ ಈ ಹಣದ ವಿನಿಯೋಗವಾಗುತ್ತಿತ್ತು. ಆಚರಣೆಗೆ ಕೂಡ ಈ ಹಣದ ವಿನಿಯೋಗವಾಗುತ್ತಿತ್ತು. ಒಬ್ಬ ನುರಿತ ರಾಜಕಾರಣಿಯಾಗಿ, ನಿಜವಾದ ಅರ್ಥದಲ್ಲಿ ರಾಜ್ಯದ ಹಿತಚಿಂತಕಿಯಾಗಿ ಸಮಾಜಮುಖಿಯಾದ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾಗಿದ್ದಳು. ಹಾಗಾಗಿ ಅವಳ ಆಳ್ವಿಕೆಯ ಪ್ರದೇಶದಲ್ಲಿ ಶಾಂತಿ, ನೆಮ್ಮದಿಗಳು ನೆಲೆಸಿದ್ದುವು. ವ್ಯಾಪಾರಗಳು ಗುಣಮಟ್ಟದ ಪದಾರ್ಥಗಳೊಂದಿಗೆ ವ್ಯವಹಾರ ನಡೆಸುತ್ತಿದ್ದರೆ, ರೈತ ಜನರು ಉತ್ತಮ ಬೆಳೆಯಿಂದ ಸಂತೃಪ್ತರಾಗಿದ್ದು, ಯಾರದ್ದೇ ಸಮಸ್ಯೆ ತನ್ನ ಗಮನಕ್ಕೆ ಬಂದೊಡನೆ ಅದರ ಬಗ್ಗೆ ಕೂಲಂಕುಷವಾಗಿ ತನಿಖೆ ಮಾಡಿ ಪರಿಹಾರ ದೊರೆಯುವಂತೆ ಮಾಡುತ್ತಿದ್ದಳು. ಆಡಳಿತವೆನ್ನುವುದು ಕೇವಲ ಅಧಿಕಾರ ನಡೆಸುವುದಷ್ಟೇ ಅಲ್ಲ. ಪ್ರಜೆಗಳ ಹಿತರಕ್ಷಣೆಯೇ ಮುಖ್ಯ ಕರ್ತವ್ಯವೆನ್ನುವುದನ್ನು ತನ್ನ ಆಳ್ವಿಕೆಯಲ್ಲಿ ನಿರೂಪಿಸಿದ್ದಳು. ಇಂದಿನ ರಾಜಕಾರಣಿಗಳಿಗೆ ಅತ್ಯುತ್ತಮ ಮಾದರಿಯಾಗಿರುವ ಅಹಲ್ಯಾಬಾಯಿ ಹೋಳ್ಕರ್ ಹದಿನೆಂಟನೇ ಶತಮಾನದಲ್ಲಿಯೇ ತನ್ನ ಆಡಳಿತ ಪದ್ಧತಿಯ ಅಚ್ಚುಕಟ್ಟುತನದಿಂದ ಎಲ್ಲರ ಗೌರವವನ್ನು ಗಳಿಸಿದ್ದಳು. ತನ್ನ ಪ್ರಜೆಗಳು ಏಳಿಗೆ ಹೊಂದುತ್ತಿರುವುದನ್ನು ನೋಡಲು ಸದಾ ಉತ್ಸುಕಳಾಗಿರುತ್ತಿದ್ದಳು.

ಆಕೆಯ ಆಡಳಿತ ನೀತಿಯೇ ವಿಶಿಷ್ಟವಾಗಿತ್ತು. ಅದಕ್ಕೆ ಬೇಕಾದ ಚಿಂತನಾ ಶೈಲಿ ಕೂಡ ವಿಭಿನ್ನವಾಗಿತ್ತು. ಸಮಸ್ತ ಭಾರತೀಯರ ದೃಷ್ಟಿಯಲ್ಲಿ 'ಗಂಗೆ' ಕೇವಲ ಒಂದು ನದಿಯಲ್ಲ, ಪರಮ ಪೂಜನೀಯವಾದ ಒಂದು ದಿವ್ಯಸ್ವರೂಪ, ನಮ್ಮ ಆಧ್ಯಾತ್ಮಶಕ್ತಿಯ ಸೆಲೆ, ಸಾಂಸ್ಕೃತಿಕ ಸಂಪತ್ತಿನ ಬಹುಮುಖ್ಯ ಭಾಗ, ನೈತಿಕಶಕ್ತಿ ನೀಡುವ ಆಧಾರ, ದೇಶದಾದ್ಯಂಥ ಇರುವ ಈ ಒಂದೇ ಭಾವನೆ ದೇಶವನ್ನು ಏಕಸೂತ್ರದಲ್ಲಿ ಬಂಧಿಸುವ ಮಂತ್ರವೆಂಬ ಸತ್ಯದ ಅರಿವು ಅವಳಿಗಿತ್ತು. ಗಂಗೆಯ ಮೂಲಕ ವಿಭಿನ್ನ ಸಂಸ್ಕೃತಿಗಳ ಜನರನ್ನು ಈ 'ಅದ್ಭುತ' ಶಕ್ತಿಯ ಮೂಲಕ ಒಂದುಗೂಡಿಸುವ ಉದ್ದೇಶದಿಂದ ಪ್ರತಿವರ್ಷ ಗಂಗಾಜಲವನ್ನೂ ದೇಶದಾದ್ಯಂತ ಆಕೆ ಸ್ಥಾಪಿಸಿದ್ದ 34 ಪೀಠಗಳಿಗೆ ತಲುಪಿಸುವ ವ್ಯವಸ್ಥೆ ಮಾಡಿದ್ದಳು.

ಎಲ್ಲಕ್ಕಿಂತ ವಿಶೇಷವೆಂದರೆ ಆಕೆಯಲ್ಲಿದ್ದ ಸ್ತ್ರೀಪರಕಾಳಜಿ. ತನ್ನ ಸಾಮ್ರಾಜ್ಯದ ಯಾವುದೇ ಮಹಿಳೆ ತನ್ನ ನಿರ್ವಹಣೆಗಾಗಿ ತನ್ನ ಪತಿಯನ್ನೇ ಅವಲಂಬಿಸದೆ ಸ್ವಾಭಿಮಾನವನ್ನು ಕಾಯ್ದುಕೊಳ್ಳಲು ಬೇಕಾದ ಒಂದು 'ನಿಧಿ'ಯ ವ್ಯವಸ್ಥೆ ಮಾಡಿದ್ದಳು. ಇದು ಮಹಿಳೆಯರ ಆತ್ಮಬಲವನ್ನು ಹೆಚ್ಚಿಸಿತ್ತು. ಇಂದು 'ಮಹಿಳಾ ಸ್ವಾತಂತ್ರ್ಯ ಎಂದು ಬೊಬ್ಬೆ ಹಾಕುವ ಇಂದಿನ ಸಂಘಟಕರು 18ನೇ ಶತಮಾನದಲ್ಲಿಯೇ ಒಬ್ಬ ಅಧಿಕಾರಸ್ಥ ಮಹಿಳೆ ಎಷ್ಟು ವಿವೇಚನೆಯಿಂದ ಹೆಣ್ಣಿನ ಆತ್ಮಗೌರವದ ರಕ್ಷಣೆಯ ಕುರಿತು ಕಾಳಜಿ ವಹಿಸಿದ್ದಳೆಂಬುದನ್ನು ತಿಳಿಯಬೇಕು.

ರಾಣಿ ಅಹಲ್ಯಾಬಾಯಿಯ ಹೆಸರು ದೇಶದಾದ್ಯಂತ ಮಹಿಳೆಯರಷ್ಟೇ ಅಲ್ಲ ಸಮಸ್ತ ಭಾರತೀಯರೂ ಪೂಜ್ಯಭಾವದಿಂದ ಸ್ಮರಿಸುವಂತಹದ್ದಾಗಿದೆ. 1996ರಲ್ಲಿ ಆಕೆಯ ಗೌರವಾರ್ಥ ಅಂಚೆಚೀಟಿಯ ಬಿಡುಗಡೆಯಾಗಿದೆ. ವಾರಣಾಸಿಯಲ್ಲಿ 'ಅಹಲ್ಯಾಘಾಟ್' ಎಂದು ಒಂದು ಘಾಟ್‌ಗೆ ಹೆಸರಿದೆ. ಇಂದೂರ್ ವಿಶ್ವವಿದ್ಯಾಲಯಕ್ಕೆ 'ದೇವಿ ಅಹಲ್ಯಾ ವಿಶ್ವವಿದ್ಯಾಲಯ'ವೆಂದು ಮರುನಾಮಕರಣ ಮಾಡಲಾಗಿದೆ. ನವದೆಹಲಿಯಲ್ಲಿ ಅಹಲ್ಯಾಬಾಯಿ ಹೋಳ್ಕರ್ ಪ್ರತಿಮೆಯನ್ನು ಸ್ಥಾಪಿಸಲಾಗಿದೆ.

'ನಾರೀಶಕ್ತಿ' ಎಂಬುದರ ಹಿರಿಮೆಯಿರುವುದು ಆಕೆಯಲ್ಲಿರುವ ಬೌದ್ಧಿಕ, ನೈತಿಕ ಶಕ್ತಿಗಳ ಸಂಗಮದಲ್ಲಿ ಎಂಬುದಕ್ಕೆ ಸ್ಪಷ್ಟನಿದರ್ಶನ 'ರಾಣಿ ಅಹಲ್ಯಾಬಾಯಿ'ಯ ಜೀವನ. ಆಕೆಯ ಕರ್ತವ್ಯನಿಷ್ಠೆ ಎಲ್ಲ ಕಾಲಕ್ಕೂ ಎಲ್ಲರಿಗೂ ಆದರ್ಶಪ್ರಾಯ. ವಿದ್ಯಾರ್ಥಿಗಳಿಗೆ ನೀಡಬೇಕಾದ ಶಿಕ್ಷಣದ ಒಂದು ಅವಿಭಾಜ್ಯ ಅಂಶವೇ ಇಂತಹವರ ಚರಿತ್ರೆ. ಅಂದಮೇಲೆ 'ಪ್ರಾತಃಸ್ಮರಣೀಯರು' ಇಂತಹವರೇ ತಾನೇ?

●

# ಸಾಧನೆ, ಕೃತಜ್ಞತೆಯ ಕಥೆ

■ ಶ್ರೀ ಬಾಲಕೃಷ್ಣ ಭಟ್
Ex MLC

ಹರ್ಬರ್ಟ್ ಹೋವರ್ ಎಂಬ ಕಡುಬಡವ ವಿದ್ಯಾರ್ಥಿ ಅಮೇರಿಕಾ ದೇಶದವನು. ಬಾಲ್ಯದಲ್ಲೇ ಹೆತ್ತವರನ್ನು ಕಳೆಕೊಂಡ. 12ನೇ ವರ್ಷಕ್ಕೆ ತನ್ನ ಸಮೀಪದ ಬಂಧುಗಳೂ ಕೈಬಿಟ್ಟರು. ಯಾರ್‍ಯಾರದೋ ಕೈಕಾಲು ಹಿಡಿದು ಶ್ರದ್ಧೆಯಿಂದ ಓದಿದ. ಸ್ಟಾನ್‌ಫೋರ್ಡ್ ವಿ.ವಿ.ಯಲ್ಲಿ ಇಂಜಿನಿಯರಿಂಗ್ ಕಲಿಯಲು ಸೇರಿಕೊಂಡ. ಈ ಶಿಕ್ಷಣಕ್ಕೆ ತುಂಬಬೇಕಾದ ಶುಲ್ಕ, ಪುಸ್ತಕದ ಖರ್ಚು ಮುಂತಾದವನ್ನು ಹೊಂದಿಸಲು ತುಂಬಾ ಒದ್ದಾಡಿದ. ಕೊನೆಗೊಂದು ಯೋಚನೆ ಬಂತು. ತನ್ನ ಸ್ನೇಹಿತನ ಜೊತೆಗೂಡಿ ಖ್ಯಾತ ಸಂಗೀತಗಾರ ಪೋಲೆಂಡ್‌ನ ಪಡೆರೇವ್‌ಸ್ಕಿಯ ಸಂಗೀತ ಸಂಜೆ ಏರ್ಪಡಿಸಿದ.

ಬಹಳ ಶ್ರಮಪಟ್ಟು ಟಿಕೆಟ್ ಮುದ್ರಿಸಿ ಎಲ್ಲರಿಗೂ ಹಂಚಿದ. ಸಂಗೀತಗಾರನಿಗೆ 2000 ಡಾಲರ್ ನೀಡಲು ಒಪ್ಪಿಕೊಂಡಿದ್ದ. ಕಾರ್ಯಕ್ರಮ ಅತ್ಯಂತ ಯಶಸ್ವಿಯಾಯಿತು. ಕೊನೆಗೆ ಲೆಕ್ಕಮಾಡುವಾಗ ಸಿಕ್ಕಿದ್ದು 1600 ಡಾಲರ್ ಮಾತ್ರ. ಆಕಾಶವೇ ತಲೆ ಮೇಲೆ ಬಿದ್ದ ಅನುಭವವಾಯ್ತು.

ಸಂಗೀತ ಏರ್ಪಡಿಸಿ ದುಡ್ಡು ಉಳಿಸಿ ತನ್ನ ಶಿಕ್ಷಣ ಪೂರೈಸಬೇಕೆಂಬ ಮಹದಾಸೆ ನೀರಾಯಿತು. ಆದರೂ ಎದೆಗುಂದಲಿಲ್ಲ. ಸಂಗೀತಗಾರ ಪಡೇರೇವಸ್ಕಿಯ ಬಳಿ ಬಂದು ಆದ ಕಥೆಯನ್ನು ವಿವರಿಸಿ ಅಂಗಲಾಚಿದ. ಬಾಕಿ 400 ಡಾಲರ್‌ಗೆ ಚೆಕ್ ನೀಡಿ ಎರಡು ತಿಂಗಳ ಸಮಯ ಕೇಳಿದ. ಸಂಗೀತಗಾರನ ಮ್ಯಾನೇಜರ್ ಅಸಮಧಾನ ವ್ಯಕ್ತಪಡಿಸಿದ. ಆಗ ಪಡೇರೇವ್‌ಸ್ಕಿ ಆ ಹುಡುಗನನ್ನು ಬಳಿಗೆ ಕರೆದು ಹೇಳಿದ " ಆ ಹಣ ನಿಮ್ಮ ಬಳಿಯಲ್ಲೇ ಇರಲಿ. ಕಾರ್ಯಕ್ರಮದ ಖರ್ಚುಗಳೆಲ್ಲ ಕಳೆದು ನಿನ್ನ ಪರೀಕ್ಷೆ ಫೀಸು, ಪುಸ್ತಕದ ಖರ್ಚು ಎಲ್ಲಾ ಕಳೆದು ಒಂದೇ ಡಾಲರು ಉಳಿದರೂ ಸಾಕು. ಅದನ್ನು ಕೊಟ್ಟುಬಿಡು. ನಿನಗೆ ಜೀವನದಲ್ಲಿ ಒಳ್ಳೆಯದಾಗಲಿ ಎಂದು ಹೇಳಿ ಹೊರಟೇಬಿಟ್ಟ.

ಕಾಲ ಉರುಳಿತು. ಸಂಗೀತಗಾರನಾಗಿದ್ದ ಪೆಡರೇವಸ್ಕಿ ರಾಜಕೀಯ ಪ್ರವೇಶಿಸಿದ. ಕೊನೆಗೆ ಪೋಲೆಂಡ್ ದೇಶದ ಪ್ರಧಾನಮಂತ್ರಿಯೇ ಆಗಿಬಿಟ್ಟ. ಆದರೆ ಮೊದಲ ಮಹಾಯುದ್ಧದ ಕಾಲವಾಗಿತ್ತು. ಅದು ದೇಶದಲ್ಲಿ ಭೀಕರ ಬರಗಾಲ. ಜೊತೆಗೆ ಯುದ್ಧದ ಪರಿಣಾಮಗಳು. ಖಜಾನೆ ಪೂರ್ತಿ ಖಾಲಿ. 19 ಲಕ್ಷಕ್ಕೂ ಹೆಚ್ಚು ಮಂದಿ ಹಸಿವು ಅನಾರೋಗ್ಯಗಳಿಂದ ನರಳತೊಡಗಿದರು.

ಆಗ ಪ್ರಧಾನಿ ಪಡೇರೇವ್‌ಸ್ಕಿ ರೇಡಿಯೋ ಮೂಲಕ ಅಮೇರಿಕಾ ದೇಶದ ಆಹಾರ ಸಚಿವರಿಗೆ ಸಹಾಯಕ್ಕಾಗಿ ಅಂಗಲಾಚಿದ. ಅಮೇರಿಕಾದ ಆಹಾರ ಸಚಿವ ಪೋಲೆಂಡ್ ಕೇಳಿದ್ದಕ್ಕಿಂತಲೂ ಎರಡು ಪಟ್ಟು ಆಹಾರಸಾಮಗ್ರಿ ಕಳಿಸಿಕೊಟ್ಟ! ಸಹಾಯ ಮಾಡಿದ ಅಮೇರಿಕಾ ದೇಶಕ್ಕೆ ಕೃತಜ್ಞತೆ ಸಲ್ಲಿಸಲು ಸ್ವತಃ ಪಡೇರೇವ್‌ಸ್ಕಿ ಬಂದ. ಅಮೇರಿಕಾದ ಆಹಾರಸಚಿವರಿಗೆ ಪೋಲೆಂಡ್ ದೇಶದ ಪ್ರಧಾನಿ ಧನ್ಯವಾದ ಹೇಳುತ್ತಿದ್ದಂತೆ "ಸರ್ ದಯವಿಟ್ಟು ನೀವು ಧನ್ಯವಾದ ಹೇಳಬಾರದು. ನಾನೇ ನಿಮಗೆ ಧನ್ಯವಾದ ಹೇಳಬೇಕಾಗಿದೆ. 27 ವರ್ಷ ಪೂರ್ವದಲ್ಲಿ ನಿಮ್ಮ ಸಂಗೀತ ಕಾರ್ಯಕ್ರಮ ಏರ್ಪಡಿಸಿ ಹಣಕೊಡಲಾಗದೆ ಇದ್ದಾಗ ನೀವು ಏನೂ ಹಣ ತೆಗೆದುಕೊಳ್ಳದೆ ಚೆನ್ನಾಗಿ ಓದಿ, ಒಳ್ಳೆಯದಾಗಲಿ ಎಂದು ನೀವು ಹೇಳಿದ್ದಿರಿ. ಅದೇ ಹುಡುಗ ಹರ್ಬರ್ಟ್ ಹೂವರ್ ನಾನೇ ಸರ್" ಎಂದರು.

●

# ರಾಷ್ಟ್ರೀಯ ಶಿಕ್ಷಣ ನೀತಿ – 2019



**ಡಾ॥ ಟಿ. ಎನ್. ಲೋಕೇಶ್**
**ಪ್ರಾಧ್ಯಾಪಕರು ಮತ್ತು ಚಿಂತಕರು**

"ಯಾವುದೇ ರಾಷ್ಟ್ರದ ಶಿಕ್ಷಣದ ಗುಣಮಟ್ಟ, ಆ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯನ್ನು ಅಳತೆ ಮಾಡುವ ಮಾನದಂಡ". ಶಿಕ್ಷಣ ಸಮಾಜದಲ್ಲಿ ಬದಲಾವಣೆ ಉಂಟು ಮಾಡುವ ಪ್ರಬಲ ಸಾಧನ. ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿನ ಅವಿಚ್ಛಿನ್ನ ಬದಲಾವಣೆ ಪ್ರಗತಿಯ ದ್ಯೋತಕ. ಬದಲಾವಣೆ ಸದಾ ಸಕಾರಾತ್ಮಕ, ಧನಾತ್ಮಕ ಹಾಗೂ ಜನಪರವಾದಾಗ ಮಾತ್ರ ಸಾಮಾಜಿಕ ಸಂರಚನೆಯ ಪರಿಷ್ಕರಣೆ ಮತ್ತು ಸಂಸ್ಕರಣೆಯ ಪ್ರಕ್ರಿಯೆ ಸಾಧ್ಯವಾಗುತ್ತದೆ.

ಶಿಕ್ಷಣ ಸಮಾಜದ ಜಾಗೃತ ಆತ್ಮವಿದ್ದಂತೆ 'ಜಾಗೃತ ಆತ್ಮ ಮಾತ್ರ ಬದಲಾವಣೆಯ ಪರ್ವದಲ್ಲಿ ಯಶಸ್ವಿಯಾಗಲು ಸಾಧ್ಯ. ಒಂದರ್ಥದಲ್ಲಿ ವ್ಯಕ್ತಿಗೆ ಶಿಕ್ಷಣ ಸಿಕ್ಕಂತೆ ಆತ 'ಜಾಗೃತ'ನಾದ ಎಂದರ್ಥ. ಜಾಗೃತ ಮಾತ್ರ ಸಾಧನೆಯ ಶೃಂಗ ತಲುಪಲು ಶಕ್ತನಾಗುತ್ತಾನೆ. ಅದೇ ವ್ಯಕ್ತಿಯ ಬದುಕಿನ ನಿಜವಾದ ಸಾರ್ಥಕತೆ. "ಜಾಗೃತರು ಮಾತ್ರ ಈ ಸಮಾಜದ ಜೀವಂತರು. ಉಳಿದವರು ಬದುಕಿದ್ದರೂ ಸತ್ತಂತೆ? ಜಾಗೃತ ಅವಸ್ಥೆಯ ಎತ್ತರದ ಅನಾವರಣವೇ ಶಿಕ್ಷಣ ಗುಣಮಟ್ಟದ ಅಳತೆಗೋಲು.

ವ್ಯಕ್ತಿ ಜಾಗೃತನಾದರೆ ರಾಷ್ಟ್ರ ಜಾಗೃತವಾದಂತೆ. ಅಂತಹ ರಾಷ್ಟ್ರ ಜಾಗೃತಿಯೇ 'ರಾಷ್ಟ್ರೀಯ ಶಿಕ್ಷಣ' ಈ ನಿಟ್ಟಿನಲ್ಲಿ ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಶಿಕ್ಷಣ ಗುಣಮಟ್ಟ ಕಾಪಾಡುವ ದೂರದೃಷ್ಟಿಯ ಮಹತ್ವಾಕಾಂಕ್ಷೆಯ ಮಹತ್ತರ ಮೈಲಿಗಲ್ಲೆ ರಾಷ್ಟ್ರೀಯ ಶಿಕ್ಷಣ ನೀತಿ–2019.

ಡಾ॥ ಕಸ್ತೂರಿ ರಂಗನ್‌ರವರ ನೇತೃತ್ವದಲ್ಲಿ ಸಂರಚನೆಗೊಂಡು ರಾಷ್ಟ್ರೀಯ ಶಿಕ್ಷಣ ನೀತಿಯ ಕರಡುಪ್ರತಿಯನ್ನು ಮೇ–31,2019 ರಂದು ಕೇಂದ್ರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯಕ್ಕೆ ಸಲ್ಲಿಸಲಾಗಿದೆ. ಪ್ರಸಕ್ತ ರಾಷ್ಟ್ರದಾದ್ಯಂತ ಮುಕ್ತ ಸಾರ್ವಜನಿಕ ಚರ್ಚೆಗೆ ವೇದಿಕೆ ದೊರಕಿದ್ದು ಜನಸಾಮಾನ್ಯರು ಜೂನ್30, 2019ರವರೆಗೆ ತಮ್ಮ ಗುಣಾತ್ಮಕ ಸಲಹೆ ಮತ್ತು ಸೂಚನೆಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿದೆ.

ರಾಷ್ಟ್ರೀಯ ಶಿಕ್ಷಣ ನೀತಿ–2019 ರ ಕರಡು ಪ್ರತಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ವಿವಿಧ ಆಯಾಮಗಳಿವೆ. ವಿಶೇಷವಾಗಿ ಶಾಲಾ ಶಿಕ್ಷಣ, ಶಾಲಾ ಸಂರಚನೆ, ಪಠ್ಯಕ್ರಮ ವ್ಯವಸ್ಥೆ, ಅಧ್ಯಾಪಕರ ನೇಮಕಾತಿ ಕುರಿತಂತೆ ಗಮನಾರ್ಹ ಅಂಶಗಳಿವೆ. ಶಾಲಾ ಶಿಕ್ಷಣದಲ್ಲಿ ಭಾಷೆಗಳಿಗೆ ಸಂಬಂಧಿಸಿದಂತೆ 1964–66ರ ಕೊಠಾರಿ ಶಿಕ್ಷಣ ಆಯೋಗದ ಶಿಫಾರಸ್ಸಿನಂತೆ 'ತ್ರಿಭಾಷಾ' ಸೂತ್ರವನ್ನು ಅನುಸರಿಸಲಾಗುತ್ತಿದೆ. ವಾಸ್ತವವಾಗಿ ನಾವು ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದೇವೆ ಎಂಬುದು ನಮ್ಮೆಲ್ಲರ ಮುಂದಿರುವ ಪ್ರಶ್ನೆಯಾಗಿದೆ.

ಪ್ರಸ್ತುತ ಶಿಕ್ಷಣ ನೀತಿಯಲ್ಲಿ, ಮಕ್ಕಳಿಗೆ ಅತೀ ಹೆಚ್ಚು ಭಾರತೀಯ ಭಾಷೆಗಳನ್ನು ಕಲಿಯುವ ಮತ್ತು ಕಲಿಸುವ ವಾತಾವರಣ ಶಾಲೆಗಳಲ್ಲಿ ನಿರ್ಮಾಣವಾಗಬೇಕು. ಮಗುವನ್ನು ಕೇವಲ ನಿರ್ದಿಷ್ಟ ಭಾಷೆಗಳ ಕಲಿಕೆಗೆ ಮಾತ್ರ ಸೀಮಿತಗೊಳಿಸಬಾರದು. ಒಂದು ಹಂತದವರೆಗೆ ಮಾತೃಭಾಷೆಯಲ್ಲಿ ಶಿಕ್ಷಣ ಸಾಗಬೇಕು. ತದನಂತರ ಮಗುವು ಮಾತೃಭಾಷೆಯ ಜೊತೆಗೆ ಸ್ಥಾನಿಕ ಭಾಷೆ, ಪ್ರಾದೇಶಿಕ ಭಾಷೆ, ಬೇರೆ ಬೇರೆ ರಾಜ್ಯಗಳ ಭಾಷೆ ಮತ್ತು ಅಂತಾರಾಷ್ಟ್ರೀಯ ಭಾಷೆಯನ್ನು ಸಹ ಕಲಿಯುವಂತಹ ಅವಕಾಶ ಒದಗಿಸಿಕೊಡಬೇಕು. ಮಗುವಿನ ಮೂರು ವರ್ಷದಿಂದಲೇ ಭಾಷೆಯ ಕಲಿಕೆ ಆರಂಭವಾಗಬೇಕು. ಮಗುವು ಅತೀ ಹೆಚ್ಚು ಭಾಷೆಗಳ ಜ್ಞಾನ ಹೊಂದಬೇಕು. ಆ ಮೂಲಕ ಸಾಮಾನ್ಯ ವ್ಯವಹಾರ ಜ್ಞಾನ ಬೆಳಸಿಕೊಳ್ಳಬೇಕು. ಕೇವಲ ಓದು ಮತ್ತು ಬರವಣಿಗೆ ಮಾತ್ರ ಭಾಷೆಯ ಕಲಿಕೆಯಲ್ಲ. ಜೊತೆಗೆ ಮಾತನಾಡುವ ಕೌಶಲ್ಯವು ಸಹ ಭಾಷೆಯ ಕಲಿಕೆಯಾಗಿದೆ.

ರಾಷ್ಟ್ರೀಯ ಶಿಕ್ಷಣನೀತಿ– 2019ರ ಆಶಯದಂತೆ ಭಾರತೀಯ ಭಾಷೆಗಳಲ್ಲಿ ಹೆಚ್ಚು ಸಂಪನ್ಮೂಲಗಳು ಸಿಗುವ ಹಾಗೆ ಆಗಬೇಕು. 'ಭಾಷೆ' ಮಗುವಿನಲ್ಲಿ ಕಲಿಯುವ ಆಸಕ್ತಿಯ ಹಸಿವನ್ನು ನಿರ್ಮಾಣಮಾಡಿ 'ಬಹುಭಾಷಿ' ಮಗುವನ್ನಾಗಿ ಮನ್ವಂತರಗೊಳಿಸಬೇಕು. 'ಭಾಷಾಕಲಿಕೆ' ಒಂದು ಅವಕಾಶ ಆದರೆ ಅದು ಹೇರಿಕೆಯಲ್ಲ ಅಥವಾ ಕಡ್ಡಾಯವಲ್ಲ.

ಪ್ರಸಕ್ತ ರಾಷ್ಟ್ರದಾದ್ಯಂತ ಚಾಲ್ತಿಯಲ್ಲಿರುವ 10+2+3 5+3+3+4 ಶಿಕ್ಷಣ ನಮೂನೆ ಅತ್ಯಂತ ಮಹತ್ವದ್ದೆಸಿದೆ. ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಬೆಳಗಿನ ಉಪಾಹಾರ ಸಿಗಬೇಕು ಎಂಬುದು ಶಿಕ್ಷಣ ನೀತಿಯ ಆಶಯ. ಖಾಸಗಿ ಶಾಲೆಗಳು ಇನ್ನೂ ಮುಂದೆ ತಮ್ಮ ಶಾಲೆಗಳ ಹೆಸರಿನಲ್ಲಿ 'ಪಬ್ಲಿಕ್' ಎಂಬ ಪದವನ್ನು ಬಳಸಿಕೊಳ್ಳುವಂತಿಲ್ಲ. 'ಶಿಕ್ಷಣನೀತಿಯ ಪ್ರಕಾರ ಖಾಸಗಿ ಅನುದಾನಿತ ಮತ್ತು ಸರ್ಕಾರಿ ಶಾಲೆಗಳು ಪಬ್ಲಿಕ್ ಶಾಲೆಗಳಾಗಿವೆ. 30:01 ರಂತೆ ವಿದ್ಯಾರ್ಥಿ ಶಿಕ್ಷಕರ ಅನುಪಾತವಿರಬೇಕು. ಶಿಕ್ಷಕರಾಗ ಬಯಸುವವರು ನಾಲ್ಕು ವರ್ಷದ ಸಮನ್ವಯ ಬಿ.ಇಡಿ ಪೂರ್ಣಗೊಳಿಸಿರಬೇಕು. ರಾಷ್ಟ್ರೀಯ ಶಿಕ್ಷಣ ನೀತಿ–2019ರ ಅತ್ಯಂತ ಮಹತ್ವದ ಶಿಫಾರಸ್ಸೆಂದರೆ 'ಶಿಕ್ಷಕ ವೃತ್ತಿ' ಯ ಘನತೆ ಗೌರವವನ್ನು ಎತ್ತಿ ಹಿಡಿದಿರುವುದು. ಶಿಕ್ಷಕನೆಂದರೆ ರಾಷ್ಟ್ರ ನಿರ್ಮಾಪಕ, ಆತನ ಕಾಯಕ ಉದಾತ್ತವಾದದ್ದು ಆದ್ದರಿಂದ ಶಿಕ್ಷಕರನ್ನು ಚುನಾವಣೆ ನಿಮಿತ್ತದ ಕಾರ್ಯ ಹಾಗೂ ಬಿಸಿಯೂಟ ತಯಾರಿಕೆಯಲ್ಲಿ ಬಳಸಿಕೊಳ್ಳುವಂತಿಲ್ಲ. ಶಿಕ್ಷಣ ನೀತಿಯ ಪ್ರಕಾರ ಶಿಕ್ಷಕರ ಸಮಗ್ರ ಏಕಾಗ್ರತೆ ಕೇವಲ ಬೋಧನೆ–ಕಲಿಕೆ ಮಾತ್ರ ಸೀಮಿತವಾಗಿರಬೇಕು.

ನಿಜವಾದ ಶಿಕ್ಷಣ ಮಗುವಿನ ಹೃದಯ ವೈಶಾಲ್ಯತೆಗೆ ಪೂರಕವಾಗಿರಬೇಕು. ಆಗ ಮಾತ್ರ ಅದು ಭಾವನಾತ್ಮಕತೆಯ ಸದ್ಭಧತೆ ತಂದು ರಾಷ್ಟ್ರದ ಪ್ರತಿಯೊಬ್ಬ ಭಾರತೀಯರನ್ನು ಭಾವನಾತ್ಮಕವಾಗಿ ಬಂಧಿಸುತ್ತದೆ. ತತ್ಪರಿಣಾಮ ಏಕತೆ, ಸಮಗ್ರತೆ, ಅಖಂಡತೆ, ಸಾಕಾರಗೊಳ್ಳುತ್ತದೆ.' ರಾಷ್ಟ್ರೀಯ ಪ್ರಜ್ಞೆ' ಜಾಗೃತವಾಗುತ್ತದೆ. ಪ್ರಸ್ತುತ ಭಾರತೀಯ ಸಮಾಜಕ್ಕೆ ಇಂತಹ ಧೀರೋದತ್ತ ಆಶಯದ 'ಶಿಕ್ಷಣ ನೀತಿ' ಯ ಅವಶ್ಯಕತೆ ಇದೆ. ಭಾರತದ ಭವ್ಯ ಇತಿಹಾಸ, ಪರಂಪರೆ ಹಾಗೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತ್ಯಾಗ, ಬಲಿದಾನ ಮಾಡಿ ಹುತಾತ್ಮರಾದ ಸ್ವಾತಂತ್ರ್ಯ ಹೋರಾಟಗಾರರ ಬದುಕಿನ ಅಧ್ಯಯನ ಕಡ್ಡಾಯಗೊಳಿಸುವುದು ತತ್‌ಕ್ಷಣದ ಅಗತ್ಯವಾಗಿದೆ. 'ಮಿಲಿಟರಿ ಶಿಕ್ಷಣ' ಶಿಕ್ಷಣದ ಕಡ್ಡಾಯ ಭಾಗವಾಗಬೇಕು.

"ಶಿಕ್ಷಣ ಸಮಾಜದ ಕಟ್ಟಕಡೆಯ ಜನಸಾಮಾನ್ಯನಿಗೂ ಸಿಗುವಂತಿರಬೇಕು. ವ್ಯಕ್ತಿ ಶಿಕ್ಷಣದಿಂದ ವಂಚಿತನಾದರೆ ಶಿಕ್ಷಣವೇ ವ್ಯಕ್ತಿಯನ್ನು ಅರಸಿ ಹೋಗಬೇಕು". ●

**ದಿನಾಂಕ 8,9,10 ನವೆಂಬರ್ 2019 ರಲ್ಲಿ ಎ.ಬಿ.ಆರ್.ಎಸ್.ಎಂ. ನ ರಾಷ್ಟ್ರೀಯ ಅಧಿವೇಶನ ಗುಜರಾತಿನ ಮೆಹಸಾನದಲ್ಲಿ ನಡೆಯಲಿದೆ. ಪ್ರತಿ ಜಿಲ್ಲೆಯಿಂದ 7 ಜನ ಪ್ರತಿನಿಧಿಗಳು (ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸಂಘಟನಾ ಕಾರ್ಯದರ್ಶಿ, ಖಜಾಂಚಿ, ಇಬ್ಬರು ಮಹಿಳಾ ಪ್ರತಿನಿಧಿಗಳು) ಅಪೇಕ್ಷಿತರು. ತಮ್ಮ ತಮ್ಮ ಜಿಲ್ಲಾ ಕೇಂದ್ರದ ಅಪೇಕ್ಷಿತರ ಪಟ್ಟಿ ಮಾಡಿ ಆರಕ್ಷಣೆ (ರಿಜರ್ವೇಷನ್) ಮಾಡಿಸಿ, ಪ್ರತಿನಿಧಿಗಳ ಹೆಸರಿನ ಪಟ್ಟಿಯನ್ನು ಬೆಂಗಳೂರಿನ ಕೇಂದ್ರ ಕಛೇರಿಗೆ ಕಳುಹಿಸುವುದು.**

# ಶಿಕ್ಷಣ ನೀತಿ ಕರಡು ರಚನೆ ಸಮಿತಿಯ ಸದಸ್ಯ ಪ್ರೊ॥ ಎಂ.ಕೆ.ಶ್ರೀಧರ್ ಜೊತೆ ನಡೆಸಿದ ಸಂದರ್ಶನ

### ■ ಈ ಒಟ್ಟು ಪ್ರಕ್ರಿಯೆ ಶುರುವಾದದ್ದು ಹೇಗೆ?

ರಾಷ್ಟ್ರೀಯ ಶಿಕ್ಷಣ ನೀತಿಯನ್ನು ನಾವು ಪ್ರಾರಂಭಿಸಿಲ್ಲ. ಅದು ಹಿಂದಿನಿಂದ ಇರುವ ಸಂಗತಿ. ಆದರೆ ಕಾಲದಲ್ಲಾದ ಬದಲಾವಣೆಗಳಿಗೆ ತಕ್ಕಂತೆ ಶಿಕ್ಷಣ ಕ್ಷೇತ್ರದಲ್ಲೂ ಒಂದಷ್ಟು ಬದಲಾವಣೆಗಳು ಆಗಬೇಕಾಗುತ್ತದೆ. ಸುಮಾರು ವರ್ಷಗಳಿಂದ ಅಂಥ ಬದಲಾವಣೆ ಆಗಿರಲಿಲ್ಲ. ಆದ್ದರಿಂದ ಈಗಿನ ಜಗತ್ತಿನ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಅದಕ್ಕೆ ತಕ್ಕ ಬದಲಾವಣೆಗಳು ಶಿಕ್ಷಣರಂಗದಲ್ಲಿ ಬರಬೇಕು ಎಂಬ ಸರಕಾರದ ಆಶಯದ ಕಾರಣ, ಶಿಕ್ಷಣ ನೀತಿಯ ಕರಡು ಸಮಿತಿ ರಚನೆಯಾಯಿತು. ಡಾ॥ ಕಸ್ತೂರಿರಂಗನ್ ಅದರ ಅಧ್ಯಕ್ಷರಾದರು.

### ■ ಕರಡಿನಲ್ಲಿ ನೀವು ಪ್ರತಿಪಾದಿಸಿದ ಪ್ರಮುಖ ಅಂಶಗಳು?

ಭಾಷೆಯ ಕಲಿಕೆಗೆ ಹೆಚ್ಚು ಒತ್ತು ಕೊಟ್ಟಿದ್ದೇವೆ. ಯಾವ ಭಾಷೆಯನ್ನೂ ವಿದ್ಯಾರ್ಥಿಗಳ ಮೇಲೆ ಹೇರಬಾರದು ಎಂದು ಪ್ರತಿಪಾದಿಸಿದ್ದೇವೆ. ಇದುವರೆಗೆ ಕಡ್ಡಾಯ ಶಿಕ್ಷಣ 6 ರಿಂದ 14 ವರ್ಷಗಳವರೆಗಿನ ಮಕ್ಕಳಿಗೆ ಮಾತ್ರ ಅನ್ವಯವಾಗಿತ್ತು. ಅದು 3 ರಿಂದ 18 ವಯಸ್ಸಿನ ಎಲ್ಲರಿಗೂ ಅನ್ವಯವಾಗಬೇಕು. ಅದು 3 ರಿಂದ 18 ವಯಸ್ಸಿನ ಎಲ್ಲರಿಗೂ ಅನ್ವಯವಾಗಬೇಕು ಎಂದು ಹೇಳಿದ್ದೇವೆ. ಸಂಶೋಧನಾ ಕ್ಷೇತ್ರದಲ್ಲಿ ಸರಕಾರ ದೊಡ್ಡ ಪ್ರಮಾಣದಲ್ಲಿ ಬಂಡವಾಳ ತೊಡಗಿಸಬೇಕು ಎಂದು ಹೇಳಿದ್ದೇವೆ. ಕಲಿಕೆ ಒಂದು ಆನಂದದಾಯಕ ಅನುಭವವಾಗಬೇಕೇ ಹೊರತು ಶಿಕ್ಷೆ ಅನ್ನಿಸಬಾರದು. ಆ ನಿಟ್ಟಿನಲ್ಲಿ ಏನೆಲ್ಲ ಬದಲಾವಣೆ ತರಬಹುದು ಎಂದು ಚರ್ಚಿಸಿದ್ದೇವೆ.

### ■ ಈ ಶಿಫಾರಸುಗಳನ್ನು ಅಳವಡಿಸಿಕೊಂಡು ಆಗುವ ಬದಲಾವಣೆ ಯಾವಾಗ ಕಾಣಿಸಲು ಪ್ರಾರಂಭವಾಗಬಹುದು?

ಕನಿಷ್ಠ ಹತ್ತು ವರ್ಷ ಬೇಕು ಎಂದು ನನ್ನ ಅಭಿಪ್ರಾಯ. ಮುಖ್ಯವಾಗಿ ಸರಕಾರಗಳು ಬದಲಾದಾಗ ಶಿಕ್ಷಣ ನೀತಿಗಳು ಬದಲಾಗುವ ಪರಿಸ್ಥಿತಿ ಇರಬಾರದು. ಅದಕ್ಕಾಗಿಯೇ ರಾಷ್ಟ್ರೀಯ ಶಿಕ್ಷಣ ಆಯೋಗದ ರಚನೆಗೆ ನಾವು ಶಿಫಾರಸು ಮಾಡಿರುವುದು. ಈ ಆಯೋಗದಲ್ಲಿ ಪ್ರಧಾನಿ ಅಧ್ಯಕ್ಷರು, ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಮುಖ್ಯಮಂತ್ರಿಗಳೂ ಇದರ ಸದಸ್ಯರಾಗಿರಬೇಕು. ಶಿಕ್ಷಣ ಆಯೋಗದಲ್ಲಿ ದೇಶದ ನುರಿತ ಶಿಕ್ಷಣ ತಜ್ಞರು ದೊಡ್ಡ ಸಂಖ್ಯೆಯಲ್ಲಿರಬೇಕು. ಆಯೋಗ ಒಂದು ಸ್ವಾಯತ್ತ ಸಂಸ್ಥೆಯಾಗಿ ಕೆಲಸ ಮಾಡಬೇಕು.

### ■ ಉನ್ನತ ಶಿಕ್ಷಣದ ವಿಷಯದಲ್ಲಿ ಏನೇನು ಬದಲಾವಣೆ ಬಯಸಿದ್ದೀರಿ?

ಈಗ ನಮ್ಮಲ್ಲಿ ಒಂದು ವಿಶ್ವವಿದ್ಯಾಲಯ, ಅದರ ಕೆಳಗೆ ನೂರಿನ್ನೂರು ಕಾಲೇಜುಗಳು ಈ ವ್ಯವಸ್ಥೆ ಇದೆ. ಇದು ಹೋಗಬೇಕು. ಕಾಲೇಜುಗಳಿಗೆ ಸ್ವತಂತ್ರ ಮಾನ್ಯತೆ ಕೊಡಬೇಕು ಮತ್ತು ವಿಶ್ವವಿದ್ಯಾಲಯ, ಕಾಲೇಜುಗಳನ್ನು ನಿಯಂತ್ರಿಸುವ ಕೆಲಸ ಬಿಟ್ಟು ತಾನೂ ಗಂಭೀರವಾಗಿ ಅಧ್ಯಾಪನ, ಸಂಶೋಧನೆ ಮುಂತಾದವುಗಳಲ್ಲಿ ತೊಡಗಬೇಕು. ಇನ್ನು ಲಿಬರಲ್ ಆರ್ಟ್ಸ್ ಎಂಬ ವಿಷಯದಲ್ಲಿ ಪದವಿ ಕೊಡಬೇಕು ಎಂದೂ ಹೇಳಿದ್ದೇವೆ. ವಿದ್ಯಾರ್ಥಿಗಳಿಗೆ ಇಚ್ಛೆಯ ವಿಷಯ ಆಯ್ದುಕೊಂಡು ಅದರಲ್ಲಿ ಡಿಗ್ರಿ ಪಡೆಯುವ ಅವಕಾಶ ಇರಬೇಕು. ಲಿಬರಲ್ ಆರ್ಟ್ಸ್ ಪದವಿ ಕೊಡುವ ಕಾಲೇಜುಗಳನ್ನು, ಮೊದಲ ಹಂತದಲ್ಲಿ ಪ್ರತಿ ಜಿಲ್ಲೆಗೆ ಒಂದರಂತೆ ಸ್ಥಾಪಿಸಬೇಕು ಎಂದು ಹೇಳಿದ್ದೇವೆ.

### ■ ಅಭಿಜಾತ (ಕ್ಲಾಸಿಕಲ್) ಭಾಷೆಗಳಿಗೆ ಒತ್ತು ಕೊಟ್ಟಿದೀರಿ

ಹೌದು. ಇಲ್ಲಿ ಅಭಿಜಾತ ಎಂದರ ಮೃತ ಭಾಷೆಗಳು ಅಂತ ಅರ್ಥಅಲ್ಲ. ನಮ್ಮ ದೇಶದ ಬಹಳಷ್ಟು ಸಾಹಿತ್ಯ ಇರುವ ಯಾವುದೇ ಭಾಷೆ ಎಂದು ಹೇಳಬಹುದು. ಸಂಸ್ಕೃತದಲ್ಲಿ ಈ ದೇಶದ ಬಹಳಷ್ಟು ಪ್ರಾಚೀನ ಸಾಹಿತ್ಯ ರಚನೆಯಾಗಿದೆ. ಅದನ್ನು ಅರ್ಥೈಸಿಕೊಳ್ಳಲು ಸಾದ್ಯವಾದರೆ ಅದೊಂದು ಧನಾತ್ಮಕ ಸಂಗತಿಯೇ ತಾನೆ? ಸಂಸ್ಕೃತ ಒಂದೇ ಅಲ್ಲ. ತಮಿಳು, ಕನ್ನಡ, ಪಾಲಿ, ಪ್ರಾಕೃತ, ಪರ್ಶಿಯನ್ ಮುಂತಾದ ಎಲ್ಲ ಭಾಷೆಗಳಿಗೂ ಆದ್ಯತೆ ಸಿಗಬೇಕು ಎಂದು ಕರಡಿನಲ್ಲಿ ಹೇಳಿದ್ದೇವೆ.

### ■ ಇತ್ತೀಚೆಗೆ, ಈ ಕರಡಿನಲ್ಲಿ ಹಿಂದಿ ಹೇರಿಕೆ ಮಾಡಲಾಗಿದೆ ಎಂಬ ಆರೋಪ ಬಂತಲ್ಲ?

ಇಂದು ಮಾಹಿತಿಯ ಕೊರತೆಯಿಂದ ಆಗಿರುವ ಸಮಸ್ಯೆ ಎಂದು ಭಾವಿಸುತ್ತೇನೆ. ಇಲ್ಲಿ ಮೂರು ಅಂಶಗಳನ್ನು ನಾನು ಹೇಳಬೇಕು. ಒಂದು ನಾವು ಹಿಂದಿಯನ್ನು ದಕ್ಷಿಣ ಭಾರತದಲ್ಲಿ ಕಡ್ಡಾಯವಾಗಿ ಕಲಿಸಬೇಕು ಎಂದು ಹೇಳಿಲ್ಲ. ಹಿಂದಿ ಎಲ್ಲಿ ರಾಜ್ಯ ಭಾಷೆ ಅಲ್ಲವೋ ಅಂಥ ರಾಜ್ಯಗಳಲ್ಲಿ ಆಯಾ ರಾಜ್ಯದ ಭಾಷೆ, ಇಂಗ್ಲೀಷ್ ಮತ್ತು ದೇಶದ ಬೇರಾವುದಾದರೂ ಭಾಷೆ– ಇವುಗಳನ್ನು ಕಲಿಯಬಹುದು ಎಂದು ಹೇಳಿದ್ದೇವೆ. ಹಾಗೆಯೇ ಹಿಂದಿ ರಾಜ್ಯಭಾಷೆಯಾಗಿರುವ ರಾಜ್ಯಗಳಲ್ಲಿ ಹಿಂದಿ, ಇಂಗ್ಲೀಷ್ ಜೊತೆಗೆ ದೇಶದ ಯಾವುದಾದರೂ ಭಾಷೆ ಕಲಿಸಲು ವ್ಯವಸ್ಥೆ ಆಗಬೇಕು ಎಂದು ಹೇಳಿದ್ದೇವೆ. ಇಲ್ಲಿ ಯಾವುದೇ ಭಾಷೆಯನ್ನು ಯಾವುದೇ ಸಮುದಾಯದ ಮೇಲೆ ಹೇರುವ ಯೋಚನೆ ಇಲ್ಲ. ಎರಡು –ನಾವು ಒಂದು ವೇಳೆ ಹಿಂದಿಯನ್ನು ಕಲಿಯಲೇಬೇಕು ಎಂದು ಒತ್ತಾಯ ಮಾಡಿದ್ದೆವು ಎಂದೇ ಇಟ್ಟುಕೊಳ್ಳೋಣ; ಆಗ ದೇಶದಲ್ಲಿ ಕಾನೂನು ಜಾರಿಯಾಗಿಯೇಬಿಟ್ಟಿತು ಎಂದು ಅರ್ಥವಲ್ಲ ಅಲ್ಲವೇ? ಯಾಕೆಂದರೆ ನಾವು ರಚಿಸಿರುವುದು ಕರಡು ಮಾತ್ರ. ಅದನ್ನು ತಿದ್ದಲು ಅವಕಾಶವಿದೆ. ಸಾರ್ವಜನಿಕ ಅಭಿಪ್ರಾಯಗಳನ್ನು ಸ್ವೀಕರಿಸಿ, ಕರಡಿನಲ್ಲಿ ಆಗಬೇಕಾದ ಎಲ್ಲ ಬದಲಾವಣೆ ಆದ ನಂತರವಷ್ಟೇ ಅದು ಅಂತಿಮರೂಪ ತಳೆಯುತ್ತದೆ. ಮೂರು– ಇದು ಒಂದು ಶಿಫಾರಸು ಮಾತ್ರ. ಯಾವ ಭಾಷೆ ಕಲಿಸಬೇಕು, ಯಾವುದನ್ನು ಬಾರದು ಎಂಬ ಎಲ್ಲ ಅಧಿಕಾರವೂ ರಾಜ್ಯ ಸರಕಾರಗಳ ವಿವೇಚನೆಗೆ ಬಿಟ್ಟದ್ದು. ನಾವು ಕೇವಲ ಶಿಫಾರಸು ಮಾಡಬಹುದು ಅಷ್ಟೆ. ನಾವು ಹೇಳಿದ್ದೆಲ್ಲವನ್ನೂ ರಾಜ್ಯ ಸರಕಾರಗಳು ಪಾಲಿಸಬೇಕಿಲ್ಲ. ಇದೇನೂ ಹೊಸ ಸಂಗತಿಅಲ್ಲ. ಇದುವರೆಗಿನ ಎಲ್ಲ ರಾಷ್ಟ್ರೀಯ ಶಿಕ್ಷಣ ನೀತಿಗಳೂ ಹೀಗೆಯೇ ಇದ್ದವು. ಆದ್ದರಿಂದ ಈಗ ಇದ್ದಕ್ಕಿದ್ದಂತೆ ವಿವಾದಗಳು ಯಾಕೆ ಸೃಷ್ಟಿಯಾಗಿದೆ ತಿಳಿಯುತ್ತಿಲ್ಲ!

MAG(3)/NPP/26/2018-19 Registered No. RNI 45459/85 Posted at Bangalore PSO Bangalore -560 026
Date of Publishing : 17-06-2019 Date of Posting 20h or 21st of every month Posted at Periodical Rate

# ಚಿತ್ರ ಸುದ್ದಿ





ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಇಂದು ಸಾಂದರ್ಭಿಕ ರಜೆಯಲ್ಲಿ ಶಿಕ್ಷಕರಿಗಾದ ಅನ್ಯಾಯವನ್ನು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಮನವಿ ಪತ್ರ ನೀಡಿ ಶಿಕ್ಷಕರಿಗಾಗಿರುವ ಗೊಂದಲವನ್ನು ಪರಿಹರಿಸಲು ಒತ್ತಾಯಿಸಲಾಯಿತು. ಈ ವಿಷಯವನ್ನು ಪತ್ರಿಕೆ ಮತ್ತು ಮಾಧ್ಯಮ ಮಿತ್ರರು ಪ್ರಸಾರ ಮಾಡುವ ಮೂಲಕ ಪುಷ್ಟಿ ನೀಡಿದರು.



ಮೇ 18 ಮತ್ತು 19, 2019 ಪ್ರಯೋಗ ಎಜುಕೇಷನ್ ರೀಸರ್ಚ್ ಸೆಂಟರ್, ಕನಕಪುರ ರಸ್ತೆಯ ಯಡಮುಡು ಇಲ್ಲಿ "ಪಂಚಕೋಶಾತ್ಮಕ ವ್ಯಕ್ತಿತ್ವ ವಿಕಾಸ" ಶಿಬಿರದಲ್ಲಿ ಭಾಗವಹಿಸಿದ ಪ್ರತಿನಿಧಿಗಳು




ದಿನಾಂಕ 3,4/6/19 ರಂದು ಉತ್ತರಾಖಂಡದ ಡೆಹ್ರಾಡೂನ್‌ನಲ್ಲಿ ನಡೆದ ರಾಷ್ಟ್ರೀಯ ಕಾರ್ಯಕಾರಿಣಿಯಲ್ಲಿ ಕರ್ನಾಟಕದ ಪ್ರತಿನಿಧಿಗಳು

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED PLEASE RETURN TO SENDER

Printed By :
General Secretary,
Karnataka Rajya Madhyamika Shikshaka Sangha ®.)
Published By:
General Secretary,
Karnataka Rajya Madhyamika Shikshaka Sangha (R.)
Owned By :
Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : General Secretary, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com